

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 Issue : 27 Tuesday 01-10-2024 E-mail : maruti.b.hosamani76@gmail.com Page: 4 Price : Rs. 1/-


## “ವಿಜಯಪತಾಕೆ” ಡಬ್ಬಿಂಗ್ ಮುಕ್ತಾಯ





**ಸಿಹಿ ಕಹಿ ಸುದ್ದಿ**

**ಗಜೇಂದ್ರಗಡ :** ಶ್ರೀ ಷಣ್ಮುಖಪ್ಪ. ಆರ್. ಎಲ್ ಅವರ ಶ್ರೀ ಬೊಮ್ಮಸಾಗರ ದುರ್ಗಾದೇವಿ ಪ್ರೊಡಕ್ಷನ್ ಚಿತ್ರ ನಿರ್ಮಾಣ ಸಂಸ್ಥೆಯ ಅಡಿಯಲ್ಲಿ ನಿರ್ಮಾಣವಾಗುತ್ತಿರುವ 'ವಿಜಯಪತಾಕೆ' ಕನ್ನಡ ಚಲನ ಚಿತ್ರದ ಡಬ್ಬಿಂಗ್ ಕಾರ್ಯ ಮುಕ್ತಾಯವಾಗಿದೆ. ಬೆಂಗಳೂರಿನ ಸಿಕೆ ಸ್ಟುಡಿಯೋದಲ್ಲಿ ಪೋಸ್ಟ್ ಪ್ರೊಡಕ್ಷನ್ ಎಲ್ಲ ಕಾರ್ಯಗಳನ್ನು ಮುಗಿಸಿದ್ದು ಇದೀಗ ಸೆನ್ಸಾರ್ಗೆ ಹೊರಟಿದೆ. ಗಜೇಂದ್ರಗಡದ ಆರ್.ಶೈನ್ ನಾಯಕನಾಗಿ ನಟಿಸಿ, ನಿರ್ದೇಶಿಸಿ, ನಿರ್ಮಿಸಿರುವ 'ವಿಜಯಪಾತಕೆ' ಚಿತ್ರವನ್ನು ಉತ್ತರ ಕರ್ನಾಟಕದವರೇ ನಿರ್ಮಿಸುತ್ತಿರುವದು ಹೆಮ್ಮೆಯ ಸಂಗತಿ.

ಧಾರವಾಡ ಜಿಲ್ಲೆಯ ನಿಗದಿ, ಬೆಣಕನಕಟ್ಟೆ, ಮುರಕಟ್ಟಿ ಮತ್ತು ಹಳಿಯಾಳ, ದಾಂಡೇಲಿ, ಗದಗ ಜಿಲ್ಲೆಯ ಗಜೇಂದ್ರಗಡ ,ಭೈರಾಪೂರ ಸುತ್ತಮುತ್ತ, ಕೊಪ್ಪಳ ಜಿಲ್ಲೆಯ ಹನುಮಸಾಗರ, ಚಂದಾಲಿಂಗೇಶ್ವರ ದೇವಸ್ಥಾನ, ಮತ್ತು ಇಲಕಲ್ ತಾಲೂಕಿನ ಸುಕ್ಷೇತ್ರ ಸಿದ್ಧನಕೊಳ್ಳ, ಕರಾವಳಿ ಭಾಗಗಳಲ್ಲಿ ಚಿತ್ರೀಕರಣ ನಡೆಸಲಾಗಿದ್ದು ಚಿತ್ರ ಅತ್ಯುತ್ತಮವಾಗಿ ಮೂಡಿ ಬಂದಿದೆ ಎಂದು ನಿರ್ದೇಶಕ ಶೈನ್ ತಿಳಿಸಿದ್ದಾರೆ.

ಚಿತ್ರದಲ್ಲಿ ನಾಯಕನಾಗಿ ಆರ್.ಶೈನ್, ನಾಯಕಿಯಾಗಿ ವಾಣಿ ಬಿಜಾಪೂರ. ಮುಖ್ಯ ಖಳನಾಯಕರಾಗಿ ಶೋಭರಾಜ್ ಅಭಿನಯಿಸಿದ್ದಾರೆ. ಇನ್ನುಳಿದಂತೆ ಕಲಾವಿದರಾಗಿ ಹರೀಶ್ ಪತ್ತಾರ, ಆನಂದ. ಕೆ, ಸಂಗನಗೌಡ ಕುರುಡಗಿ, ರಾಜಕುಮಾರ ಪಾಟೀಲ್, ಪಾಲಾಕ್ಷ, ಹುಸೇನ್ ಪತ್ತೇಖಾನ್, ನೇತ್ರಾ, ಅನ್ನಪೂರ್ಣ, ಪ್ರಕೃತಿ, ರಮಜಾನಸಾಬ್ ಉಳ್ಳಾಗಡ್ಡಿ, ಮುಂತಾದವರು ಅಭಿನಯಿಸಿದ್ದಾರೆ. ಕಥೆ, ಚಿತ್ರಕಥೆ, ಸಂಭಾಷಣೆ, ಹಾಗೂ ನಿರ್ದೇಶನ ಆರ್.ಶೈನ್, ಸಂಗೀತ ರಾಘವ್ ಸುಭಾಸ್, ಸಾಹಿತ್ಯ ಸುಭಾಸ್ ಬೆಟಗೇರಿ, ಹಿನ್ನೆಲೆ ಗಾಯನ ಅಭೀಷೇಕ ಎಮ್ ಆರ್ (ಕಾಟೇರಾ ಚಿತ್ರ ಖ್ಯಾತಿಯ ಗಾಯಕ) ಮೇಘನಾ ಹಳಿಯಾಳ (ಗರಡಿ ಚಿತ್ರದ ಖ್ಯಾತಿಯ ಗಾಯಕಿ), ಹಾಗೂ ಸಾತ್ವಿಕ. ಛಾಯಾಗ್ರಹಣ ಗಿರೀಶ್ ಶಿರಗೇನಹಳ್ಳಿ, ಭರತ್, ಶ್ಯಾಮ್, ಸಂಕಲನ ರವಿ ರಾಠೋಡ, ಸಾಹಸ ಸಂತೋಷ ರಾಠೋಡ, ನೃತ್ಯ ಕಂಬಿ ರಾಜು, ವರ್ಣಾಲಂಕಾರ ಶ್ರೀಕಾಂತ್ ಕುಲಕರ್ಣಿ, ವಸ್ತ್ರಾಲಂಕಾರ ಸಾವಿತ್ರಿ ರಂಗ್ರೇಜಿ, ಪತ್ರಿಕಾ ಸಂಪರ್ಕ ಡಾ, ಪ್ರಭು ಗಂಜಿಹಾಳ, ಡಾ, ವೀರೇಶ ಹಂಡಿಗಿ, ಕ್ರಿಯೇಟಿವ್ ಹೆಡ್ ಸಿ.ಜಿ.ವೆಂಕಟೇಶರಾವ್ ಅವರಿದ್ದಾರೆ. ಕಿತ್ತೂರ ಕರ್ನಾಟಕ, ಕಲ್ಯಾಣ ಕರ್ನಾಟಕದ ಕಲಾವಿದರಿಗೆ ಹೆಚ್ಚಿನ ಅವಕಾಶ ನೀಡಲಾಗಿದೆ. ಚಿತ್ರವು ಕರ್ನಾಟಕದಾದ್ಯಂತ ಬಿಡುಗಡೆ ಆಗಲಿದ್ದು, ಪ್ರೇಕ್ಷಕರು ಈ ಚಿತ್ರದ ಬಿಡುಗಡೆಯನ್ನು ಎದುರು ನೋಡುತ್ತಿದ್ದು, ನಿರ್ಮಾಪಕ, ನಿರ್ದೇಶಕ ಹಾಗೂ ಚಿತ್ರ ತಂಡವು ಚಿತ್ರ ಗೆಲ್ಲುವ ನಿರೀಕ್ಷೆಯಲ್ಲಿ ಇದ್ದಾರೆ.

**ವರದಿ: ಡಾ.ಪ್ರಭು ಗಂಜಿಹಾಳ**
**ಮೊ: 9448775346**

## ಶರನ್ನವರಾತ್ರಿ ದಸರಾ ಧರ್ಮದ ಮೌಲ್ಯ ಎತ್ತಿ ಹಿಡಿಯುವ ಕಾರ್ಯಕ್ರಮ

**ಸಿಹಿ ಕಹಿ ಸುದ್ದಿ**

**ನರೇಗಲ್ :** ಬಾಳೆಹೊನ್ನೂರು ರಂಭಾಪುರಿ ಶ್ರೀಗಳ 33 ನೇ. ವರ್ಷದ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನವು ಅದ್ದೂರಿಯಾಗಿ ಆರಂಭವಾಗಲಿದೆ ಎಂದು ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ, ರೋಣ ಶಾಸಕ ಜಿ. ಎಸ್. ಪಾಟೀಲ ಹೇಳಿದರು.

ಸಮೀಪದ ಅಬ್ಬಿಗೇರಿ ಗ್ರಾಮದ ಅನ್ನದಾನೇಶ್ವರ ಪ್ರೌಢ ಶಾಲೆಯ ಆವರಣದಲ್ಲಿ ನಿರ್ಮಿಸಿರುವ ಮಾನವ ಧರ್ಮ ಮಂಟಪದಲ್ಲಿ ಅಕ್ಟೋಬರ್ 3 ರಿಂದ 12 ರ ವರೆಗೆ ಜರುಗಲಿರುವ ದಸರಾ ಧರ್ಮ ಸಮ್ಮೇಳನದ ಅಂಗವಾಗಿ ಅಬ್ಬಿಗೇರಿಯ ಹಿರೇಮಠದಲ್ಲಿ ಭಾನುವಾರ ಸಂಜೆ ನಡೆದ ಸಭೆಯಲ್ಲಿ ಮಾತನಾಡಿದರು.

ಮಳೆಗಾಲದಲ್ಲಿ ಕಾರ್ಯಕ್ರಮಕ್ಕೆ ತೊಂದರೆ ಆಗದಂತೆ ಜರ್ಮನ್ ಪೆಂಡಾಲ್ ವ್ಯವಸ್ಥೆ ಮಾಡಲಾಗಿದೆ. ಮಳೆ ಬಂದರು ಸಹ ನಿರಂತರವಾಗಿ ಕಾರ್ಯಕ್ರಮಗಳು ನಡೆಯಲಿವೆ. ಇದೊಂದು ಅಪರೂಪದ ಧಾರ್ಮಿಕ ಕಾರ್ಯಕ್ರಮವಾಗಿದ್ದು ನಮ್ಮ ಭಾಗದ ಗ್ರಾಮದಲ್ಲಿ ನಡೆಯುತ್ತಿರುವುದು ಖುಷಿ ನೀಡಿದೆ ಎಂದರು.

ನರೇಗಲ್ ಹಿರೇಮಠದ ಮಲ್ಲಿಕಾರ್ಜುನ ಶಿವಾಚಾರ್ಯರು ಮಾತನಾಡಿ, ಜನರು ಸನ್ಮಾರ್ಗದಲ್ಲಿ ನಡೆಯಲು, ಅವರಿಗೆ ಧರ್ಮದ ಕುರಿತು ಜಾಗೃತಿ ಮೂಡಿಸಲು, ಶಿವ ಭಕ್ತಿ, ಶಿವ ಜ್ಞಾನದ ಅರಿವು ನೀಡಲು ಹಾಗೂ ಧರ್ಮದ ಮೌಲ್ಯಗಳನ್ನು ಎತ್ತಿ ಹಿಡಿಯಲು ಅಬ್ಬಿಗೇರಿಯ ಧಾರ್ಮಿಕ ಸಮ್ಮೇಳನ ಸಹಕಾರಿ ಯಾಗಲಿದೆ ಎಂದರು. ಪ್ರಾಚೀನ ಕಾಲದಿಂದಲೂ ಇಷ್ಟಲಿಂಗ ಪೂಜೆಗೆ ಮಹತ್ವವಿದೆ. ಲಿಂಗ ಪೂಜೆ ಮಾಡುವುದರಲ್ಲಿ ಆನಂದ ಪಡುವರು ಶಿವ ಸಂಸ್ಕಾರಿ ಗಳಾಗಿರುತ್ತಾರೆ. ಅದಕ್ಕಾಗಿ



ಕಾರ್ಯಕ್ರಮದ ಪ್ರತಿದಿನ ಬೆಳಿಗ್ಗೆ ಇಷ್ಟಲಿಂಗ ಮಹಾಪೂಜೆ, ಶಿವ ಪೂಜೆ ನಡೆಯುತ್ತಿದೆ ಎಂದರು.

ಅಬ್ಬಿಗೇರಿ-ಸಿದ್ದರಬೆಟ್ಟದ ವೀರಭದ್ರ ಶಿವಾಚಾರ್ಯ ಮಾತನಾಡಿ, ಕೇವಲ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ನಡೆಯುತ್ತಿದ್ದ ಕಾರ್ಯಕ್ರಮ ಮೊದಲ ಬಾರಿಗೆ ಗ್ರಾಮೀಣ ಪ್ರದೇಶದಲ್ಲಿ ನಡೆಯುತ್ತಿದೆ. ಮೈಸೂರಿನಲ್ಲಿ ಅರಮನೆ ದಸರಾ ನಡೆದರೆ ಅಬ್ಬಿಗೇರಿಯಲ್ಲಿ ಗುರುಮನೆ ದಸರಾ ನಡೆಯಲಿದೆ. ಹಾಗಾಗಿ 20 ಸಾವಿರ ಜನರು ಸೇರುವ ನಿರೀಕ್ಷೆಯಿದೆ ಎಂದರು. ದೂರದ ಊರುಗಳಿಂದ ಬರುವ ಭಕ್ತರಿಗೆ ಶಾಲೆಗಳಲ್ಲಿ ವಸತಿ ವ್ಯವಸ್ಥೆ, ನಿತ್ಯ ಸಂಚಾರಕ್ಕೆ ಬೆಳಿಗ್ಗೆಯಿಂದ ರಾತ್ರಿ ವರೆಗೆ ನಿರಂತರವಾಗಿ ಕೆ.ಎಸ್.ಆರ್.ಟಿ.ಸಿ ಬಸ್ ವ್ಯವಸ್ಥೆ ಮಾಡಲಾಗಿದೆ. ಅಷ್ಟೇ ಅಲ್ಲದೆ ನಿರಂತರ ಪ್ರಸಾದ ವ್ಯವಸ್ಥೆ ಇರುತ್ತದೆ ಎಂದು ಮಾಹಿತಿ ನೀಡಿದರು. ಗುರುಗಳು ರಾಜರ ಪೋಷಾಕಿನಲ್ಲಿ ಇರುತ್ತಾರೆ ಭಕ್ತರಿಗೆ ನಜರ್ ಸಮರ್ಪಣೆಗೆ ಅವಕಾಶ ಕಲ್ಪಿಸಿ ಕೊಡಲಾಗಿದೆ ಆದರೆ ನಜರ್ ಸಮರ್ಪಣೆ ಮಾಡುವವರು ಬೆನ್ನು ತೋರಿಸಬಾರದು ಎಂದರು.

ಈ ವೇಳೆ ಕಾರ್ಯಕ್ರಮದ ಮಾಹಿತಿ ನೀಡುವ ಪೋಸ್ಟರ್ಗಳನ್ನು ಬಿಡುಗಡೆ ಮಾಡಲಾಯಿತು. ಸಂಗೋಳಿ ಹಿರೇಮಠದ ಗುರುಲಿಂಗ ಶಿವಾಚಾರ್ಯರು, ನಾಗವಂದದ ಶಿವಯೋಗಿ ಶಿವಾನಂದ ಶಿವಾಚಾರ್ಯರು, ನಾಗಠಾಣಾ ಹಿರೇಮಠದ ಸೋಮೇಶ್ವರ ಶಿವಾಚಾರ್ಯರು, ನರಸಾಪುರ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು, ಪ್ರವಚನಕಾರ ಅನ್ನದಾನ ಶಾಸ್ತ್ರಿಗಳು, ವಿ. ಬಿ. ಸೋಮನ ಕಟ್ಟಿಮಠ, ಡಾ, ಆರ್. ಕೆ. ಗಚ್ಚಿನಮಠ, ಬಸವರಾಜ ತಳವಾರ, ಬಸವರಾಜ ಪಲ್ಲೇದ, ಹನಮಂತಪ್ಪ ದ್ವಾಸಲ್ ಇದ್ದರು. ನರೇಗಲ್ ಸಮೀಪದ ಅಬ್ಬಿಗೇರಿ ಗ್ರಾಮದ ಹಿರೇಮಠದಲ್ಲಿ ಬಾಳೆಹೊನ್ನೂರು ರಂಭಾಪುರಿ ಶ್ರೀಗಳ 33 ನೇ. ವರ್ಷದ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ ಅಂಗವಾಗಿ ಭಾನುವಾರ ಸಂಜೆ ನಡೆದ ಸಭೆಯಲ್ಲಿ ಪೋಸ್ಟರ್ ಬಿಡುಗಡೆ ಮಾಡಲಾಯಿತು

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಶಿವಾನಂದ.ಎಫ್. ತೋಟಗುಂಟಿ. ಗದಗ**

## ಮಹಾಲಿಂಗಪುರದಲ್ಲಿ ಧಾರಕಾರ ಮಳೆ: ತಂಪಾದ ಇಳೆ

**ಮಹಾಲಿಂಗಪುರ :** ಪಟ್ಟಣದಲ್ಲಿ ಸೋಮವಾರ ರಾತ್ರಿ 9 ರಿಂದ 12ವರೆಗೆ ಹಾಗೂ ಮಂಗಳವಾರ ಮಧ್ಯಾಹ್ನ 12 ರಿಂದ 2ರವರೆಗೆ ಧಾರಾಕಾರ ಮಳೆ ಸುರಿಯಿತು.

ಸೋಮವಾರ ರಾತ್ರಿ ಸುರಿದ ಮಳೆಯು ಪ್ರಸಕ್ತ ವರ್ಷದ ಮಳೆಗಳಲ್ಲಿಯೇ ಅತ್ಯುತ್ತಮ ಮಳೆಯಾಗಿದೆ. ಮಂಗಳವಾರ ಮಧ್ಯಾಹ್ನ ಎರಡು ಗಂಟೆಗಳ ಕಾಲ ಸುರಿದ ಧಾರಕಾರ ಮಳೆಯಿಂದಾಗಿ ಪಟ್ಟಣದ ಎಲ್ಲಾ ಭಾಗದಲ್ಲಿನ ಚರಂಡಿಗಳು ತುಂಬಿ ಹರಿದವು. ಪಟ್ಟಣದ ಹೊಲಗದ್ದೆಗಳು ಮತ್ತು ತಂಗುಪ್ರದೇಶಗಳಲ್ಲಿ ನೀರು ನಿಂತಿರುವ ದೃಶ್ಯಗಳು ಸರ್ವೇ ಸಾಮಾನ್ಯವಾಗಿದ್ದವು.

**ಜನಜೀವನ ಅಸ್ತವ್ಯಸ್ತ:**

ನಿರಂತರ ಮಳೆಯಿಂದಾಗಿ ಎಲ್ಲಾ ರಸ್ತೆಗಳ ತಂಗುಪ್ರದೇಶಗಳಲ್ಲಿ ನೀರು ನಿಂತಿದ್ದವು. ಕೆಲವೆಡೆ ಚರಂಡಿ ತುಂಬಿ ನೀರು ರಸ್ತೆಗಳ ಮೇಲೆ ಹರಿದ ಕಾರಣ ಧಾರಕಾರ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತವಾಗಿತ್ತು. ಪಟ್ಟಣದ ಹಲವೆಡೆ ವಿದ್ಯುತ್ ತಂತಿಗಳು ಹರಿದು ವಿದ್ಯುತ್ ಪುರೈಕೆಯಲ್ಲಿ ವ್ಯತೆಯ ಉಂಟಾಗಿತ್ತು.

**ಜಾತ್ರೆ ವ್ಯಾಪಾರಸ್ಥರ ಪರದಾಟ:**

ಕಳೆದ ಮಂಗಳವಾರ ಪಟ್ಟಣದಲ್ಲಿ



ಪ್ರಾರಂಭವಾದ ಮಹಾಲಿಂಗೇಶ್ವರ ಜಾತ್ರೆಯ ಅಂಗಡಿ ಮುಗ್ಗಟ್ಟುಗಳು, ಜೇಕ್ ,ಜೋಕಾಲಿ ಸೇರಿದಂತೆ ಮನರಂಜನೆಯ ಆಟಗಳಿಗೆ ಬರುವ ಸಾರ್ವಜನಿಕರಿಗೆ ಮಳೆಯಿಂದ ತೊಂದರೆಯಾಗಿತ್ತು. ಮಂಗಳವಾರ ಸಂತೆ ಮಾಡುತ್ತಿರುವ ತರಕಾರಿ ಮತ್ತು ದಿನಸಿ ವ್ಯಾಪಾರಸ್ಥರು ಹಾಗೂ ಜಾತ್ರೆಯ ನಿಮಿತ್ಯ ಆಗಮಿಸಿದ ವಿವಿಧ ಆಟಿಕೆ ಸಾಮಾನು, ಮನೆ ಬಳಕೆ ಸಾಮಗ್ರಿಗಳು, ಬಳೆ ಅಂಗಡಿ, ಸಿಹಿತಿಂಡಿಗಳ ಅಂಗಡಿಗಳು ಸೇರಿದಂತೆ ವಿವಿಧ ವ್ಯಾಪಾರಸ್ಥರಿಗೆ ಮಳೆಯಿಂದಾಗಿ ತೀವ್ರ ತೊಂದರೆ ಅನುಭವಿಸುವಂತಾಗಿತ್ತು. ಮಂಗಳವಾರ ಸಂಜೆ ಮತ್ತೆ ಎಂದಿನಂತೆ ಜಾತ್ರೆಯ ಅಂಗಡಿಗಳ ಮುಂದೆ ಜನದಟ್ಟನೆ ಜೋರಾಗಿತ್ತು.

ಪ್ರತಿವರ್ಷವೂ ಮಹಾಲಿಂಗೇಶ್ವರ ಜಾತ್ರೆಗೆ ಮಳೆ ಆಗುವದು ಪಟ್ಟಣದಲ್ಲಿನ ವಾಡಿಕೆ. ಆದರೆ ಈ ವರ್ಷ ಜಾತ್ರೆ ಮುಗಿದ ಎರಡು ದಿನಗಳ ನಂತರ ರವಿವಾರದಿಂದ ಪ್ರಾರಂಭವಾದ ಮಳೆಯು ಕಳೆದ ಮೂರು ದಿನಗಳಿಂದ ನಿತ್ಯವು ತಪ್ಪದೆ ಸುರಿಯುತ್ತಿದೆ. ಅದರಲ್ಲೂ ಸೋಮವಾರ ರಾತ್ರಿ ಮತ್ತು ಮಂಗಳವಾರ ಮಧ್ಯಾಹ್ನ 12 ರಿಂದ 2ರವರೆಗೆ ನಿರಂತರವಾಗಿ ಸುರಿದ ಧಾರಕಾರ ಮಳೆಯು ಇಳೆಯನ್ನು ತಂಪಾಗಿಸಿ ರೈತರ ಮೊಗದಲ್ಲಿ ಮಂದಹಾಸ ಮೂಡಿಸಿತು.

**ಬೈಕ್‌ಗಳು ಜಲಾವೃತ-ಪರದಾಟ :**

ಮುಧೋಳ-ನಿಪ್ಪಾಣಿ ರಾಜ್ಯಹೆದ್ದಾರಿಯ ಮಧ್ಯೆ ಇರುವ ಪಟ್ಟಣದ ಬಸವ ವೃತ್ತದಲ್ಲಿ ರಸ್ತೆಯ ಮೇಲೆ ಎರಡು ಅಡಿಯಷ್ಟು ನೀರು ನಿಂತು, ರಸ್ತೆ ಪಕ್ಕದಲ್ಲಿ ನಿಲ್ಲಿಸಿರುವ ಬೈಕ್‌ಗಳು ಸಂಪೂರ್ಣ ಜಲಾವೃತವಾಗಿದ್ದವು. ಬಸವ ವೃತ್ತದಿಂದ ಎಪಿಎಂಸಿ ವರೆಗೆ ಚರಂಡಿ ಕಾಮಗಾರಿ ನಡೆಯುತ್ತಿರುವ ಕಾರಣ ಚರಂಡಿಯನ್ನು ಅಗೆದಿರುವ ಕಾರಣ ನೀರು ಮುಂದೆ ಸರಾಗವಾಗಿ ಹೋಗದೆ, ಮೊದಲಿನಕ್ಕಿಂತ ಜಾಸ್ತಿ ನೀರು ಬಸವ ವೃತ್ತದಲ್ಲಿ ನಿಂತ ಕಾರಣ ರಸ್ತೆಯು ಮಿನಿ ಕಾಲುವೆಯಂತಾಗಿ ವಾಹನ ಸವಾರರು,

ಪಾದಚಾರಿಗಳು ರಸ್ತೆ ದಾಟಲು ಪರದಾಡುತ್ತಿದ್ದಾರೆ. ಪಟ್ಟಣದ ಹಲವೆಡೆ ಚರಂಡಿಗಳು ತುಂಬಿ ಚರಂಡಿ ನೀರು ರಸ್ತೆಗೆ ನುಗ್ಗಿದ ಕಾರಣ ಪುರಸಭೆ ಸಿಬ್ಬಂದಿ ಜೆಸಿಬಿ ಸಹಾಯದಿಂದ ಚರಂಡಿಯನ್ನು ಸ್ವಚ್ಛಗೊಳಿಸಿದರು.

## ಕಬಡ್ಡಿ ಕ್ರೀಡೆಯಲ್ಲಿ ಸೊನ್ನ ಪ್ರೌಢಶಾಲೆಯ ಮಕ್ಕಳು ಜಿಲ್ಲಾ ಮಟ್ಟಕ್ಕೆ ಆಯ್ಕೆ



**ಬೀಳಗಿ :** ತಾಲೂಕು ಮಟ್ಟದ ಬಾಲಕರ ಕಬಡ್ಡಿ ಪಂದ್ಯಾಟದಲ್ಲಿ ಸೊನ್ನ ಪ್ರೌಢ ಶಾಲೆಯ ಬಾಲಕರು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

2024-25 ನೇ ಸಾಲಿನ ತಾಲೂಕ ಮಟ್ಟದ ಪ್ರೌಢ ಶಾಲೆಗಳ ಕಬ್ಬಡಿ ಫೈನಲ್ ಪಂದ್ಯ ಶುಕ್ರವಾರ ಪಟ್ಟಣದ ಹೋಲಿಸೇಂಟ್ ಆಂಗ್ಲ ಮಾಧ್ಯಮಿಕ ಶಾಲೆಯಲ್ಲಿ ನಡೆದವು. ಟಾಸ್ ಗೆದ್ದು ಮೈದಾನ್ ಆಯ್ಕೆ ಮಾಡಿಕೊಂಡು ಆಟ ಆರಂಭಿಸಿದ ಚಿಕ್ಕಾಲಗುಂಡಿ ತಂಡ, ಆರಂಭದಲ್ಲಿ ಸಮಬಲ ಹೋರಾಟ ನಡೆಸಿಕೊಂಡು ಬಂದವು. ಎರಡು ತಂಡಗಳು ಕೊನೆಯ ಎರಡು ನಿಮಿಷದ ಆಟದಲ್ಲಿ ರೋಚಕ ಹಣಾಹಣ ನಡೆದು ಸೊನ್ನ ತಂಡ 01 ಅಂಕಗಳಿಂದ ವಿಜಯ ಸಾಧಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದೆ ಎಂದು ದೈಹಿಕ ಶಿಕ್ಷಕ ಎಂ.ಬಿ ತಾಂಬೋಳೆ ತಿಳಿಸಿದರು.

ಫೈನಲ್ ಪಂದ್ಯದ ನಿರ್ಣಾಯಕರಾಗಿ, ಬಿ.ಎನ್. ಗೌಡರ, ಎಸ್.ಎಚ್ ಲಮಾಣಿ, ಎಸ್.ಎಚ್.ಕವಡಿ, ಶಫೀಕ್ ಇನಾಮದಾರ, ಪರಶುರಾಮ್ ಮುತ್ತೂರ, ಚಂದ್ರು ಪರಸಗೊಂಡ ಇಬ್ಬರು.

**ವರದಿ : ತೌಸಿಫ ಗಣಿ**

## ಕನಕದಾಸ ಪತ್ತಿನ ಸಹಕಾರಿ ಸಂಘಕ್ಕೆ 37.99 ಲಕ್ಷ ನಿವ್ವಳ ಲಾಭ: ಮಹಾಲಿಂಗಪ್ಪ ಜಕ್ಕನ್ನವರ

**ಮಹಾಲಿಂಗಪುರ :** ಕನಕದಾಸ ಪತ್ತಿನ ಸಹಕಾರಿ ಸಂಘವು 2023-24ನೇ ಸಾಲಿನಲ್ಲಿ 37.99 ಲಕ್ಷ ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಆಡಳಿತ ಮಂಡಳಿ ಅಧ್ಯಕ್ಷ ಮಹಾಲಿಂಗಪ್ಪ ಜಕ್ಕನ್ನವರ ಹೇಳಿದರು. ಮಂಗಳವಾರ ಸಂಜೆ ಸಂಘದ ಆವರಣದಲ್ಲಿ ಜರುಗಿದ 22ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ಸಂಘವನ್ನು ಒಟ್ಟು 2133 ಸದಸ್ಯರನ್ನು ಹೊಂದಿದೆ. ಒಟ್ಟು 128.34 ಲಕ್ಷ ರೂ ಶೇರು ಬಂಡವಾಳ ಹೊಂದಿದೆ. 1775.63 ಲಕ್ಷ ರೂ ಠೇವು ಬಂಡವಾಳ ಇರುತ್ತದೆ. ಬ್ಯಾಂಕಿನಿಂದ ಒಟ್ಟು 16.88 ಕೋಟಿ ಸಾಲವನ್ನು ವಿತರಿಸಲಾಗಿದೆ. ಸಂಘದ ಆಡಳಿತ ಮಂಡಳಿಯ ಸದಸ್ಯರು ಮತ್ತು ಗ್ರಾಹಕರು ಹೆಚ್ಚಾಗಿ ಠೇವಣಿ ಮತ್ತು ಸಕಾಲಕ್ಕೆ ಸಾಲದ ಮರುಪಾವತಿಯ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು. ಕಳೆದ 22 ವರ್ಷಗಳಿಂದ ಪಾರದರ್ಶಕ



ಮತ್ತು ನಿಶ್ವಾರ್ಥ ಸೇವೆಯಿಂದ ಸಂಘವು ಪ್ರಗತಿಪಥದಲ್ಲಿ ಮುನ್ನಡೆಯುತ್ತಿದೆ ಎಂದರು.

ಸಂಘದ ಆಡಳಿತ ಮಂಡಳಿ ಸದಸ್ಯ ಮಹಾಲಿಂಗಪ್ಪ ಸನದಿ ಮಾತನಾಡಿ ಸಹಕಾರಿ ಸಂಘಗಳು ಅವಶ್ಯಕತೆ ಇದ್ದವರಿಗೆ ಸಾಲವನ್ನು ವಿತರಿಸುವ ಮೂಲಕ ಗ್ರಾಹಕರ ಆರ್ಥಿಕ ಅಭಿವೃದ್ದಿಗೆ ಶ್ರಮಿಸುತ್ತಿವೆ. ಗ್ರಾಹಕರ ಸಹಕಾರ, ಆಡಳಿತ ಮಂಡಳಿಯ ಪರಸ್ಪರ ಸಹಕಾರ ಮನೋಭಾವನೆ ಹಾಗೂ ಸಿಬ್ಬಂದಿಯ ಪಾರದರ್ಶಕ ವ್ಯವಹಾರದಿಂದಾಗಿ ಸಂಘವು ಇಂದು 20.85 ಕೋಟಿ ದುಡಿಯುವ ಬಂಡವಾಳವನ್ನು ಹೊಂದಿದೆ. ಕಳೆದ ವರ್ಷ 1 ಕೋಟಿಗೂ ಅಧಿಕ ವೆಚ್ಚದಲ್ಲಿ ಸ್ವಂತ ಕಟ್ಟಡವನ್ನು ನಿರ್ಮಿಸಲಾಗಿದೆ. ಜೊತೆಗೆ ಬಿಡಿಸಿಸಿ ಬ್ಯಾಂಕಿನಿಂದ ಉತ್ತಮ ಕೃಷಿಯೇತರ ಸಹಕಾರಿ ಸಂಘ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಸಂಘದ ಸದಸ್ಯರು, ಸಿಬ್ಬಂದಿಯ ನಿಸ್ವಾರ್ಥ ಸೇವೆಯಿಂದಾಗಿ ಸಂಘವು ಅಭಿವೃದ್ದಿಯತ್ತ ಸಾಗಿದೆ ಎಂದರು.

ಸಾನಿಧ್ಯವಹಿಸಿದ್ದ ಜಕನೂರಿನ ಮಾಧುಲಿಂಗ ಸ್ವಾಮಿಜಿ, ಆಡಳಿತ ಮಂಡಳಿ ಸದಸ್ಯ ಮಲ್ಲಪ್ಪ ಸಿಂಗಾಡಿ, ಪತ್ರಕರ್ತ ಲಕ್ಷ್ಮಣ ಕಿಶೋರಿ, ನ್ಯಾಯವಾದಿ ನಿಂಗನೂರ, ಗಂಗಾಧರ ಮೇಟಿ ಮಾತನಾಡಿದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಂಘದ ಸದಸ್ಯರ ಮಕ್ಕಳಿಗೆ ಶೈಕ್ಷಣೀಕ ಧನಸಹಾಯ ನೀಡಿ ಗೌರವಿಸಲಾಯಿತು.

ಸಂಘದ ಸಿಬ್ಬಂದಿ ಚಂದ್ರು ಸಂಶಿ ವಾರ್ಷಿಕ ವರದಿ ವಾಚಿಸಿದರು. ಉಪಾಧ್ಯಕ್ಷ ಶ್ರೀಶೈಲ ಕಳ್ಯಾಗೋಳ, ಸಂಘದ ನಿರ್ದೇಶಕರಾದ ಭೀಮಪ್ಪ ಸಂಶಿ, ಭೀಮಪ್ಪ ತಿಮ್ಮಾಪೂರ, ಮಲ್ಲಪ್ಪ ಮಳಲಿ, ವಿಠ್ಠಲ ಬನಾಜ, ಗಣಪತಿ ಮಡ್ಡೆನ್ನವರ, ಮೌನೇಶ ಬಡಿಗೇರ, ಶ್ರೀಮತಿ ರೇಣುಕಾ ಬಾ. ಹಾದಿಮನಿ, ಶ್ರೀಮತಿ ಸುರೇಖಾ ಮ. ಲೋಕುರಿ, ಶ್ರೀಮತಿ ಜಯಶ್ರೀ ಪ್ರ. ಸನ್ನಟ್ಟಿ, ಸಿಬ್ಬಂದಿಯಾದ ಮಹಾಲಿಂಗ ಹುಬ್ಬಳ್ಳಿ, ಶಂಕರ ಮೇಟಿ, ಮಲ್ಲಿಕಾರ್ಜುನ ಮೇಟಿ, ಆನಂದ ಪೂಜೇರಿ, ಶ್ರೀಶೈಲ ಅವಟಿ, ದಾನೇಶ ಹೂಗಾರ, ಮಹಾಲಿಂಗ ಮಾಳಿ, ನಿಶಾಂತ ಬಂಡಿ ಸೇರಿದಂತೆ ಗ್ರಾಹಕರು, ಶೇರುದಾರರು ಇದ್ದರು.

ಸಂಘದ ಮುಖ್ಯ ಕಾರ್ಯನಿವಾರ್ಹಕ ಪ್ರಭು ಹುಬ್ಬಳ್ಳಿ ಸ್ವಾಗತಿಸಿದರು. ಪತ್ರಕರ್ತ ಚಂದ್ರಶೇಖರ ಮೋರೆ ನಿರೂಪಿಸಿ-ವಂದಿಸಿದರು.

## ಮೇದಾರ ಸಮಾಜದ ಭವನಕ್ಕೆ ಜಾಗೆ ನೀಡಲು ವಿನಂತಿಸಿ ಮನವಿ



**ಮಹಾಲಿಂಗಪುರ :** ಪರಿಶಿಷ್ಠ ಪಂಗಡದ ಸಮಾಜದವಾದ ಮೇದಾರ ಸಮಾಜದ ಶೈಕ್ಷಣೀಕ, ಸಾಮಾಜಿಕ, ದಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಹಾಗೂ ಸಮಾಜದ ಪ್ರಗತಿಗಾಗಿ ಸಮುದಾಯ ಭವನದ ಅವಶ್ಯಕತೆ ಇದ್ದು, ಪುರಸಭೆ ವ್ಯಾಪ್ತಿಯಲ್ಲಿನ ಪುರಸಭೆ ಖಾಲಿ ಜಾಗೆ(ಆಯಿಲ್ ಮಿಲ್ ಪ್ಲಾಟ, ಜಯಲಕ್ಷ್ಮೀನಗರದಲ್ಲಿನ ಜಾಗೆಯನ್ನು ಮೇದಾರ ಸಮಾಜದ ಭವನಕ್ಕಾಗಿ ಮಂಜೂರಿ ಮಾಡಿಸಿ ಕೊಡಬೇಕೆಂದು ಒತ್ತಾಯಿಸಿ ಸಮಾಜದ ಹಿರಿಯರು ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಉಪಾಧ್ಯಕ್ಷೆ ಶೀಲಾ ಭಾವಿಕಟ್ಟಿ, ಮುಖ್ಯಾಧಿಕಾರಿ ಈರಣ್ಣ ದಡ್ಡಿ ಹಾಗೂ ಪುರಸಭೆಯ ಸದಸ್ಯರಿಗೆ ಮನವಿ ಸಲ್ಲಿಸಿದರು. ಸಮಾಜದ ಅಧ್ಯಕ್ಷ ಮಹಾದೇವಪ್ಪ ಮೇದಾರ, ಉಪಾಧ್ಯಕ್ಷ ಬಸಪ್ಪ ಲ.ಬುರುಡ, ಕಾರ್ಯದರ್ಶಿ ಬಸವರಾಜ ಎಂ.ಬುರುಡ, ಸಮಾಜದ ಯುವಕರಾದ ಮಹಾಲಿಂಗ ಕ.ಬುರುಡ, ಶಿವಾನಂದ ಬುರುಡೆ, ಮಹಾಲಿಂಗ ನಾ.ಬುರುಡ, ರಾಮಪ್ಪ ಬುರುಡ, ಅನೀಲ ಮೇದಾರ, ಮಹಾಲಿಂಗ ಕುಟಕನಕೇರಿ, ಸಂತೋಷ ಮೇದಾರ, ರಮೇಶ ಬುರುಡ, ಮಹೇಶ ಬುರುಡ, ಆನಂದ ಮೇದಾರ, ಪ್ರವೀಣ ಮೇದಾರ, ಮಹಾಂತೇಶ ಬುರುಡ, ಅನೀತಾ ಬುರುಡ, ಲಕ್ಷ್ಮೀ ಮೇದಾರ ಸೇರಿದಂತೆ ಹಲವರು ಇದ್ದರು.

# ಧರೆಪ್ಪ ಉಳ್ಳಾಗಡ್ಡಿ ನೇಮಕ



**ರಬಕವಿ :** ಭಾರತೀಯ ಜನತಾ ಪಕ್ಷದ ಧುರೀಣರೂ, ಸಾಮಾಜಿಕ ಕಾರ್ಯಕರ್ತರೂ ಆಗಿರುವ ಧರೆಪ್ಪಣ್ಣ ಉಳ್ಳಾಗಡ್ಡಿ ಅವರನ್ನು ಭಾರತ ಸರ್ಕಾರದ ಟೆಲಿಕಾಂ ಮತ್ತು ಪ್ರಸಾರ ಸಚಿವಾಲಯದಿಂದ ಬೆಳಗಾವಿ ವಿಭಾಗಕ್ಕೆ ( ಬೆಳಗಾವಿ – ಬಾಗಲಕೋಟೆ– ವಿಜಯಪುರ) ಟೆಲಿಕಾಂ ಸಲಹಾ ಸಮಿತಿ ಸದಸ್ಯರಾಗಿ ನೇಮಕ ಮಾಡಲಾಗಿದೆ. ಆಯ್ಕೆಗೊಂಡ ಧರೆಪ್ಪಣ್ಣ ಉಳ್ಳಾಗಡ್ಡಿ ಅವರಿಗೆ ಧಡಲ್ ಬಾಜಿ ಕನ್ನಡ ದಿನಪತ್ರಿಕೆ ಬಳಗದಿಂದ ಹಾರ್ದಿಕ ಅಭಿನಂದನೆಗಳು.

# ಮಹಾಲಿಂಗೇಶ್ವರ ಜಾತ್ರೆಯ ಸಮಾರೋಪ: ಸೇವಾರ್ಥಿಗಳಿಗೆ ಸನ್ಮಾನ



**ಮಹಾಲಿಂಗಪುರ :** ರವಿವಾರ ಸಂಜೆ ಮಹಾಲಿಂಗೇಶ್ವರ ಜಾತ್ರೆಯ ರಥದ ಕಳಸವನ್ನು ಇಳಿಸುವದರೊಂದಿಗೆ ಪ್ರಸ್ತಕ ಸಾಲಿನ ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳು ಸಮಾರೋಪಗೊಂಡವು.

ರವಿವಾರ ಮುಂಜಾನೆ ಶ್ರೀಮಠದಲ್ಲಿ ಹಮ್ಮಿಕೊಂಡಿದ್ದ ಸೇವಾರ್ಥಿಗಳ ಸನ್ಮಾನ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ಜಾತ್ರಾ ಕಮೀಟಿ ಅಧ್ಯಕ್ಷ ರವಿಗೌಡ ಪಾಟೀಲ ಮಾತನಾಡಿ ಮಹಾಲಿಂಗಪುರವು ಬೆಲ್ಲದ ನಾಡು, ಹಿಂದೂ– ಮುಸ್ಲಿಂ ಭಾವೈಕ್ಯತೆಯ ಬೀಡು ಎಂದೇ ಪ್ರಸಿದ್ದಿಯಾಗಿದೆ. ಒಂದು ದಿನ ಜಟೋತ್ಸವ, ಎರಡು ದಿನಗಳ ರಥೋತ್ಸವ, ಕುಸ್ತಿ ಪಂದ್ಯಾವಳಿ, ರಸಮಂಜರಿ, ಕಳಸ ಇಳಿಸುವದು ಸೇರಿ ಜಾತ್ರೆಯ ಪ್ರಮುಖ 6 ದಿನಗಳ ಜಾತ್ರೆಯಲ್ಲಿ ಸರ್ವ ಸಮುದಾಯಗಳ ಸದ್ಭಕ್ತರು ಶ್ರದ್ಧಾ, ಭಕ್ತಿಯಿಂದ, ಸೇವೆ ಸಲ್ಲಿಸಿದ್ದಾರೆ. ಲಕ್ಷಾಂತರ ಭಕ್ತರು ಜಾತ್ರೆಯಲ್ಲಿ ಭಾಗವಹಿಸಿದ್ದರು ಸಹ, ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದೇ, ಶಾಂತಿಯುತವಾಗಿ ಜಾತ್ರೆಯು ಜರುಗಿದ್ದು ಮಹಾಲಿಂಗೇಶ್ವರರ ಪವಾಡ ಪುರುಷ ಮಹಾಲಿಂಗೇಶ್ವರ ಕೃಪೆಯೇ ಕಾರಣವಾಗಿದೆ ಎಂದರು.

ಜಾತ್ರಾ ಯಶಸ್ವಿಗೆ ಸಹಕರಿಸಿದ ಪುರಸಭೆ, ಪೊಲೀಸ್ ಇಲಾಖೆ, ಕೆಇಬಿ ಅಧಿಕಾರಿಗಳು, ಶ್ರೀಮಠದ ಅರ್ಚಕರು, ರಥೋತ್ಸವದ ಸೇವಕರು, ಮಾಧ್ಯಮ ಪ್ರತಿನಿಗಳು, ಪ್ರಸಾದ ದಾನಿಗಳನ್ನು ಜಾತ್ರಾ ಕಮೀಟಿಯ ಹಿರಿಯರು ಸನ್ಮಾನಿಸಿ ಗೌರವಿಸಿದರು. ನಂತರ ಭಕ್ತಾಗಳಿಗೆ ಹರಿವಾನಕಟ್ಟೆ ಪ್ರಸಾದವನ್ನು ವಿತರಿಸಲಾಯಿತು. ಜಾತ್ರೆಯ ಸಮಾರೋಪ ನಿಮಿತ್ಯ ಮುಂಜಾನೆ 10 ರಿಂದ ರಾತ್ರಿ 9ರವರೆಗೆ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಆಗಮಿಸಿದ ಸಾವಿರಾರು ತುಳಜಪ್ಪ ಬಾಳಿಕಾಯಿ, ಮಲ್ಲಪ್ಪ ಬುರುಡ, ಭೀಮನಗೌಡ ಪಾಟೀಲ, ಅರ್ಜುನ ಖೋತ, ಅಶೋಕ ಮಂಟೂರ, ಪಾಂಡು ಖೋತ ಅವರು ಭಕ್ತರಿಗೆ ಮಹಾಪ್ರಸಾದ ವ್ಯವಸ್ಥೆ ಕಲ್ಪಿಸಿದ್ದರು.

ಜಾತ್ರಾ ಕಮೀಟಿ ಹಿರಿಯರಾದ ಲಕ್ಷ್ಮಣಗೌಡ ಪಾಟೀಲ, ಬಸನಗೌಡ ಪಾಟೀಲ, ಮಹಾಂತೇಶ ಹಿಟ್ಟಿನಮಠ, ಕೃಷ್ಣಗೌಡ ಪಾಟೀಲ, ಲಕ್ಕಪ್ಪ ಚಮಕೇರಿ, ಈರಪ್ಪ ದಿನ್ನಿಮನಿ,

ಬಸವರಾಜ ಪಶ್ಚಾಪೂರ, ಮಹಾಲಿಂಗಪ್ಪ ತಟ್ಟಿಮನಿ, ವಿಜುಗೌಡ ಪಾಟೀಲ, ಹಣಮಂಯ ಬಡಿಗೇರ, ಚನ್ನಪ್ಪ ಕೋಳಿಗುಡ್ಡ, ಚನ್ನಪ್ಪ ಪಟ್ಟಣಶೆಟ್ಟಿ, ಮಲ್ಲಿಕಾರ್ಜುನ ಕುಳ್ಳೊಳ್ಳಿ, ಬಸವರಾಜ ಘಂಟಿ, ಹಣಮಂತ ಬಡಿಗೇರ, ಶಿವಾನಂದ ತಾಳಿಕೋಟಿ, ಮುತ್ತಪ್ಪ ದಲಾಲ, ಪ್ರಭು ಬೆಳಗಲಿ, ಕಲ್ಲಪ್ಪ ಚಿಂಚಲಿ, ಶ್ರೀಶೈಲಗೌಡ ಪಾಟೀಲ, ಠಾಣಾಧಿಕಾರಿ ಕಿರಣ ಸತ್ತಿಗೇರಿ, ಪುರಸಭೆ ಹಿರಿಯ ಆರೋಗ್ಯ ನಿರೀಕ್ಷಕ ಎಂ.ಎಂ.ಮೂಗಳಖೋಡ, ಹೆಸ್ಕಾಂನ ರಾಜೇಶ ಬಾಗೋಜಿ,

ಸುಭಾಸ ವಜ್ಜರಮಟ್ಟಿ, ಶ್ರೀನಿವಾಸ ಮಾಲಬಸರಿ, ಈಶ್ವರ ಮಠದ, ಮಹಾಲಿಂಗ ಕರಡಿ, ಶ್ರೀಶೈಲ ಸ್ವಾಮಿ, ಸಿದ್ದಯ್ಯಾ ಸ್ವಾಮಿ, ಅನೀಲ ಕಾಲತಿಪ್ಪಿ ಸೇರಿದಂತೆ ಶ್ರೀಮಠದ ಹಿರಿಯರು, ಸೇವಕರು ಇದ್ದರು.

# ಭಾರತೀಯ ಕಿಸಾನ ಸಂಘ ತಾಲೂಕಾ ಘಟಕ ಸ್ಥಾಪನೆ



**ಮೂಡಲಗಿ :** ಭಾರತೀಯ ಕಿಸಾನ ಸಂಘ ಕರ್ನಾಟಕ ಪ್ರದೇಶ ಕರ್ನಾಟಕ ಉತ್ತರ ಪ್ರಾಂತದ ಮೂಡಲಗಿ ತಾಲೂಕಾ ಘಟಕವು ಮೂಡಲಗಿಯ ಶ್ರೀ ಶಿವಭೋದರಂಗ ಕೆಳಗಿನ ಮಠದ ಆವರಣದಲ್ಲಿ ಇಂದು ಅಧ್ಯಕ್ಷ ಉಪಾಧ್ಯಕ್ಷಕರ ನೇಮಕದೊಂದಿಗೆ ಅಸ್ತಿತ್ವಕ್ಕೆ ಬಂದಿತು,

ತಾಲೂಕಾ ಘಟಕದ ಅಧ್ಯಕ್ಷರಾಗಿ ಮೂಡಲಗಿಯ ಉಮೇಶ ಬೆಳಕೂಡ, ಉಪಾಧ್ಯಕ್ಷಕರಾಗಿ ಯಾದವಾಡದ ಕಲ್ಲಪ್ಪ ಉದಪುಡಿ ಹಾಗೂ ಖಾನಟ್ಟಿಯ ಬಸಲಿಂಗ ನಿಂಗನೂರ ಕಾರ್ಯದರ್ಶಿ ಮುನ್ಯಾಳದ ಸಂತೋಷ ಕುಲಕರ್ಣಿ, ಸಹಕಾರ್ಯದರ್ಶಿಯಾಗಿನಾಗನೂರಿನ ಕೆಂಚಪ್ಪ ಸಂಕ್ರಪ್ಪಗೋಳ,ಯುವಪ್ರಮುಖರಾಗಿ ಯಾದವಾಡದ ಹನಮಂತಗೌಡ ಪಾಟೀಲ, ಸಾವಯವ ಪ್ರಮುಖರಾಗಿ ಕಲ್ಲೋಳಿಯ ಮಲ್ಲಪ್ಪ ಖಾನಗೌಡ್ರ, ಮಹಿಳಾ ಪ್ರಮುಖರಾಗಿ ಸುಣದೋಳಿಯ ಪ್ರೇಮಾ ಗಾಣಿಗೇರ ಆಯ್ಕೆಯಾಗಿದ್ದಾರೆ ಎಂದು ರಾಜ್ಯ ಸಂಘಟನಾ ಕಾರ್ಯದರ್ಶಿ ಪುಟ್ಟಸ್ವಾಮಿ ತಿಳಿಸಿದ್ದಾರೆ, ಈ ಸಮಯದಲ್ಲಿ ಉತ್ತರ ಕರ್ನಾಟಕದ ಉತ್ತರ ಪ್ರಾಂತ ಕಾರ್ಯಕಾರಣಿ ಸದಸ್ಯ ಜೈಪಾಲ ನಾಗನೂರ,ರಾಯಬಾಗ ತಾಲೂಕಾ ಘಟಕದ ಅಧ್ಯಕ್ಷ ಮಹೇಶ ಪಾಟೀಲ,ಕಲ್ಲೋಳಿಯ ಡಾ ಭೋಜರಾಜ ಬೆಳಕೂಡ, ಹಾಗೂ ಗೋಕಾಕದ ದರ್ಶನಕುಮಾರ ಅಕ್ಕಿಸಾಗರ ಇದ್ದರೂ,

# ಚನ್ನಗಿರೇಶ್ವರ ಸಹಕಾರಿ ಸಂಘಕ್ಕೆ 41.89 ಲಕ್ಷ ರೂ.ಲಾಭ



**ಮಹಾಲಿಂಗಪುರ :** ಪಟ್ಟಣದ ಚನ್ನಗಿರೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘವು 2023–24ನೇ ಸಾಲಿಗೆ 41.89 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಚನ್ನಯ್ಯ ಚಟ್ಟಿಮಠ ಹೇಳಿದರು.

ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ಸಂಘದ 13ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. 2024ರ ಮಾರ್ಚ್ 31 ರವರೆಗೆ ಸಂಘವು 1.03 ಕೋಟಿ ರೂ. ಶೇರು ಬಂಡವಾಳ ಹೊಂದಿದೆ. ಠೇವು ರೂಪದಲ್ಲಿ ಬಾಲ ಸುರಕ್ಷಾ ಠೇವು 2.71 ಕೋಟಿ ರೂ., ರಿಕರಿಂಗ್ ಡಿಪಾಸಿಟ್ 23.39 ಲಕ್ಷ ರೂ., ಚನ್ನಗಿರೇಶ್ವರ ಕ್ಯಾಶ್ ಸರ್ಟಿಫಿಕೇಟ್ ಠೇವು 5.62 ಕೋಟಿ ರೂ., ಮುದ್ದತ ಠೇವು 7.87 ಕೋಟಿ ರೂ., ಪಿಗ್ಮಿ ಠೇವು 90 ಲಕ್ಷ ರೂ. ಹೊಂದಿದೆ ಎಂದರು.

ಸಹಕಾರಿಯು 100ಕ್ಕೂ ಹೆಚ್ಚು ಮಹಿಳಾ ಸ್ವ–ಸಹಾಯ ಸಂಘಗಳಿಗೆ ಸಾಲ ವಿತರಿಸಿ ಮಹಿಳಾ ಕ್ಷೇತ್ರದಲ್ಲಿಯೂ ಆರ್ಥಿಕ ಸಬಲತೆ ನೀಡಿದ್ದೇವೆ. ಸದಸ್ಯರಿಗೆ ಅನುಕೂಲವಾಗಲು ಸಂಪೂರ್ಣ ಗಣಕೀಕೃತ, ಇ–ಸ್ಟ್ಯಾಂಪಿಂಗ್ ವ್ಯವಸ್ಥೆ, ಖುಷಿ ಮೈಕ್ರೋಸಾಲ, ವಾಹನ ಸಾಲ, ಮುದ್ದತ ಠೇವು ಸಾಲ ಸೇರಿದಂತೆ ವಿವಿಧ ಸೇವೆಗಳನ್ನು ಪೂರೈಸಲಾಗುತ್ತಿದೆ ಎಂದರು.

ಉಪಾಧ್ಯಕ್ಷ ಪ್ರಕಾಶ ಬಾಡನವರ, ನಿರ್ದೇಶಕರಾದ ಪ್ರಕಾಶ ಭಾವಿಕಟ್ಟಿ, ರವಿ ಬಾರಕೋಲ, ಬಸವರಾಜ ಜಮಖಂಡಿ, ಮಹಾಂತೇಶ ಮನ್ನಯ್ಯನವರಮಠ, ಆನಂದ ಬೆಣಗಿ, ಮಹಾಲಿಮಗ ಕೊಣ್ಣೂರ, ಬಸವರಾಜ ಕಬ್ಬೂರ, ಸುಕನ್ಯಾ ಕಬ್ಬೂರ, ಮುಖ್ಯ ವ್ಯವಸ್ಥಾಪಕ ಮಹಾಲಿಂಗಯ್ಯ ಚಟ್ಟಿಮಠ, ಸಹ ವ್ಯವಸ್ಥಾಪಕ ಅಶೋಕ ಜಮಖಂಡಿ, ಸಿಬ್ಬಂದಿ ಸಾವಿತ್ರಿ ಗುನಾರಿ, ಬಸವರಾಜ ಮಠಪತಿ, ಈರಯ್ಯ ಹಿರೇಮಠ, ಪೂಜಾ ಜಮಖಂಡಿ ಸೇರಿದಂತೆ ಹಲವರು ಇದ್ದರು.

# ಯಶಸ್ವಿಯಾಗಿ ಜರುಗಿದ ಕ್ಯಾಂಪಸ್ ಸಂದರ್ಶನ



**ಮೂಡಲಗಿ :** ನಾಗನೂರ(ಮೂಡಲಗಿ)ನ ಚೈತನ್ಯ ವೆಲ್ಫೇರ ಸೊಸಾಯಿಟಿ(ರಿ) ಯ ಚೈತನ್ಯ ಐಟಿಐ ಮೂಡಲಗಿಯಲ್ಲಿ ನಿರುದ್ಯೋಗ ಯುವಕ–ಯುವತಿಯರಿಗಾಗಿ ಕ್ಯಾಂಪಸ್ ಸಂದರ್ಶನ ಜರುಗಿತು.

ಈ ಸಂದರ್ಶನದಲ್ಲಿ ಕ್ಯಾಡ್‌ಮ್ಯಾಕ್ಸ್ ಎಜ್ಯುಕೇಶನ್ ಕಂಪನಿ ಬೆಂಗಳೂರು ಇವರ 50 ಕ್ಕಿಂತ ಹೆಚ್ಚಿನ ಅಂತರಾಷ್ಟ್ರೀಯ ಕಂಪನಿಗಳ ಹಾಗೂ ಪು.ಕೋ.ಕು ಇಂಡಿಯಾ ಪ್ರೈವೇಟ್ ಲಿಮಿಟೆಡ್ ಬೆಳಗಾವಿ ಇವರ ಸಹಯೋಗದೊಂದಿಗೆ ಉದ್ಯೋಗ ಮೇಳ ಯಶಸ್ವಿಯಾಗಿ ಜರುಗಿತು. ಮೇಳದಲ್ಲಿ 400 ಕ್ಕಿಂತ ಅಧಿಕ ನಿರುದ್ಯೋಗಿ ಯುವಕ–ಯುವತಿಯರು ಪಾಲ್ಗೊಂಡಿದ್ದರು. ಸದರಿ ಕಾರ್ಯಕ್ರಮದಲ್ಲಿ ನಾಗನೂರ(ಮೂಡಲಗಿ)ನ ಚೈತನ್ಯ ಆಶ್ರಮ ಶಾಲೆ ಆಡಳಿತಾಧಿಕಾರಿ ಎಸ್.ಎಮ್. ಕಮದಾಳ, ಕ್ಯಾಡಮ್ಯಾಕ್ಸ್ ಕಂಪನಿ ಬೆಂಗಳೂರಿನ ಎಚ್.ಆರ್.ಡಿ ಹಾಗೂ ಸಂಪನ್ಮೂಲ ವ್ಯವಸ್ಥಾಪಕ ಪ್ರಕಾಶ, ಘುಕೊಕು ಇಂಡಿಯಾ ಪ್ರೈವೇಟ್ ಲಿಮಿಟೆಡ್ ಬೆಳಗಾವಿಯ ಸಿದ್ದಣ್ಣ ರೆಂಟೆ, ಗೋಕಾಕ ಹಾಗೂ ಮೂಡಲಗಿ ತಾಲೂಕಾ ಪ್ರಾಥಮಿಕ ಶಾಲಾ ಶಿಕ್ಷಕರ ಸಹಕಾರಿ ಪತ್ತಿನ ಸಂಘದ ಅಧ್ಯಕ್ಷ ವಾಯ್ ಬಿ. ಪಾಟೀಲ, ಚೈತನ್ಯ ವೆಲ್ಫೇರ ಸೊಸಾಯಿಟಿಯ ಅಧ್ಯಕ್ಷ ಯು. ಆರ್. ಜೋಕಿ, ಹಾಗೂ ಸಂಸ್ಥೆಯ ಪ್ರಾಚಾರ್ಯ ಎಸ್.ಬಿ. ಕುಳ್ಳೋಳಿ, ಉದ್ಯೋಗ ನಿಯೋಜಕ ಟಿ.ಆರ್. ಝಾರೆ, ಎಸ್.ಎಲ್. ಪೂಜೇರಿ ಸೇರಿದಂತೆ ಸಂಸ್ಥೆಯ ಆಡಳಿತ ಮಂಡಳಿ, ಸಿಬ್ಬಂದಿ ಉಪಸ್ಥಿತರಿದ್ದರು.

# ಸ್ನಾತಕೋತರ ಅಧ್ಯಯನಕ್ಕೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

**ಜಮಖಂಡಿ :** ನಗರದ ಬಾಗಲಕೋಟ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರತಕ್ಕ ಬಾಗಲಕೋಟೆ ಜಿಲ್ಲೆಯ ಸಂಯೋಜಿತ ಸ್ನಾತಕೋತ್ತರ ಮಹಾವಿದ್ಯಾಲಯಗಳು ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಪ್ರಸಕ್ತ 2024–25ನೇ ಶೈಕ್ಷಣಿಕ ಪ್ರವೇಶಾತಿಗಾಗಿ ಗಗಅಔಖ ನಲ್ಲಿ ಆನಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಪ್ರವೇಶಾತಿ ಅಧಿಸೂಚನೆಗೆ ಸಂಬಂಧಸಿದ ಮಾಹಿತಿಯನ್ನು ವಿಶ್ವವಿದ್ಯಾಲಯದ ಜಾಲತಾಣ www.beku.ac.in ಇದ್ದು, ಆಸಕ್ತ ಅಭ್ಯರ್ಥಿಗಳು UUCMS (https://ucms.karnataka.gov.in) ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ಮೂಲಕ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ಅಭ್ಯರ್ಥಿಗಳು UUCMS ನಲ್ಲಿ ಆನಲೈನ್ ಮೂಲಕ ಪ್ರವೇಶಾತಿ ದಂಡರಹಿತ ಅರ್ಜಿ ಶುಲ್ಕ 200 ರೂ ಪಾವತಿಸಿ ಅ.10ರ ವರೆಗೆ ಸಲ್ಲಿಸಬೇಕೆಂದು ಕುಲಪತಿ ಆನಂದ ದೇಶಪಾಂಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸ್ವಚ್ಛತಾಹಿಸೇವಾಕಾರ್ಯಕ್ರಮ–2024



**ಬಾಗಲಕೋಟೆ :** ಸ್ವಚ್ಚತೆ ಅರಿವಿಗೆ ಶ್ರಮದಾನದ ಮೂಲಕ ಸಮಾಜದ ಸಹಭಾಗಿತ್ವದ ಮುಖ್ಯವಾಗಿದೆ ಎಂದು ಪ್ರೋ.ಎಸ್.ಐ.ಪತ್ತಾರ ಹೇಳಿದರು.

ಅವರು ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಭಾರತ ಸ್ಕೌಟ್ ಅಂಡ್ ಗೈಡ್ ಹಾಗೂ ಭಾರತೀಯ ನೆಹರು ಯುವ ಕೇಂದ್ರ ಸಹಯೋಗದಲ್ಲಿ ಸ್ವಚ್ಛತಾ ಹಿ ಸೇವಾ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಮಾತನಾಡಿದರು

ಮಹಾತ್ಮ ಗಾಂಧೀಜಿಯವರ ಪರಂಪರೆಯನ್ನು ಗೌರವಿಸಲು ಮತ್ತು ಸ್ವಚ್ಛತೆಯನ್ನು ಜೀವನದ ಮಾರ್ಗವನ್ನಾಗಿ ಮಾಡಲು ಶ್ರಮದಾನದ ಮೂಲಕ ಸಮಾಜದ ಸಹಭಾಗಿತ್ವದ ಮೂಲಕ ಸ್ವಚ್ಛತೆಯ ಅರಿವನ್ನು ಮೂಡಿಸುವುದು ಅಗತ್ಯವಾಗಿದೆ,

ಸ್ವಚ್ಛತಾ ಕಾರ್ಯಕ್ರಮ ಸಾಮೂಹಿಕ ಪ್ರಕ್ರಿಯೆ ಚೈತನ್ಯವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನವಾಗಿ ಎಂದರು.

ಮಹಾವಿದ್ಯಾಲದ ಪ್ರಾಚಾರ್ಯ ಡಾ. ಜಗನ್ನಾಥ ವ್ಹಿ. ಚವ್ಹಾಣ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು, ಮಹಾತ್ಮ ಗಾಂಧೀಜಿಯವರು ಹೇಳಿದಂತೆ ಸ್ವಚ್ಛತೆಯು ಉಸಿರಾದರೆ ಜೀವನ ಹಸಿರು ಮನೆ ಯಾಗುತ್ತದೆ ಅದಕ್ಕಾಗಿ ಕೇಂದ್ರ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದ್ದು ಅವುಗಳ ಸದುಪಯೋಗವಾಗಬೇಕು ಎಂದರು.

ನೆಹರು ಯುವ ಕೇಂದ್ರದ ಮುಖ್ಯಸ್ಥರಾದ ಶ್ರೀಮತಿ ಸುಷ್ಮಾ ಗೌಳಿ, ಐ.ಕ್ಯೂ. ಎ. ಸಿ ಸಂಯೋಜಕರಾದ ಶ್ರೀಮತಿ ಜಿ.ಎಂ ನಾವದಗಿ ಅವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ 'ಸ್ವಚ್ಛತಾ ಹಿ ಸೇವಾ' ಕುರಿತು ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಮಾಡಿಸಲಾಯಿತು. ಶ್ರೀಮತಿ ಅಮೃತ ಗದ್ದನಕೇರಿ ಅವರು ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

ಪೌರ ಕಾರ್ಮಿಕರ ದಿನಾಚರಣೆ

# ಪೌರ ಕಾರ್ಮಿಕರ ಕಾರ್ಯ ಶ್ಲಾಘನೀಯ: ಲೆಂಕೆಣ್ಣವರ



**ಬಾಗಲಕೋಟೆ:** ಪ್ರತಿದಿನನಗರಸೌಂದರ್ಯಕ್ಕೆ ಶ್ರಮಿಸುತ್ತಿರುವ ಪೌರಕಾರ್ಮಿಕರ ಕಾರ್ಯ ಶ್ಲಾಘನೀಯವಾದುದು ಎಂದು ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆಣ್ಣವರ ಹೇಳಿದರು.

ನಗರಸಭೆಯ ಸಭಾಭವನದಲ್ಲಿ ಪೌರಾಡಳಿತ ನಿರ್ದೇಶನಾಯಲ ಹಾಗೂ ಜಿಲ್ಲಾಡಳಿತ ಸಹಯೋಗದಲ್ಲಿ ಹಮ್ಮಿಕೊಂಡ ಪೌರಕಾರ್ಮಿಕರ ದಿನಾಚರಣೆಕಾರ್ಯಕ್ರಮವನ್ನುಉದ್ಘಾಟಿಸಿ ಮಾತನಾಡಿದ ಅವರು ಪ್ರತಿದಿನ ಮನೆ ಸ್ವಚ್ಚಗೊಳಿಸದಿದ್ದರೆ ಎಷ್ಟೊಂದು ಗಲೀಜ ಆಗುತ್ತದೆ. ಅದೇ ರೀತಿಯ ನಗರ ಸ್ವಚ್ಚ ಇಲ್ಲದಿದ್ದರೆ ಹೇಗೆ ಆಗುತ್ತದೆ ಎಂಬುದನ್ನು ನಾವು ಕಂಡಿದ್ದೇವೆ. ಸ್ವಚ್ಛತೆಗೆ ಇನೊಂದು ಹೆಸರು ಪೌರಕಾರ್ಮಿಕರು ಎಂದು ತಿಳಿಸಿದರು.

ಕರೋನಾ ಸಮಯದಲ್ಲಿಯೂ ಪೌರಕಾರ್ಮಿಕರು ತಮ್ಮ ಕೆಲಸ ಮಾಡುವುದನ್ನು ನಿಲ್ಲಿಸಿರಲಿಲ್ಲ. ಅವರನ್ನು ಕಂಡರೆ ದೂರು ಉಳಿಯುತ್ತಿದ್ದರು. ಅವರು ಅಂದು ನಗರ ಸ್ವಚ್ಛಗೊಳಿಸುತ್ತಿರುವದರಿಂದ ಇಂದು ನಾವು ಆರೋಗ್ಯವಂತರಾಗಿರಲು ಸಾಧ್ಯ.ನಗರ ಇಷ್ಟೊಂದು ಸೌಂದರ್ಯವಾಗಿ ಕಾಣಲು ಪೌರಕಾರ್ಮಿಕರ ಕಾರಣವೆಂದರು. ಪೌರಕಾರ್ಮಿಕರ ಜೀವನ ಕಷ್ಟಕರವಾಗಿದ್ದು, ಸ್ವಚ್ಚತಾಕಾರ್ಯ ಸತ್ತು ಕೊಳೆತ ಪ್ರಾಣಿಗಳು, ಚರಂಡಿ ನೀರು, ಅಪಾಯಕಾರಿ ವಿಷ ಚಂತುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕಾಗುತ್ತದೆ ಎಂದರು.

ನಗರಸಭೆ ಪೌರಾಯುಕ್ತ ವಾಸಣ್ಣ ಆರ್. ಮಾತನಾಡಿ ಪೌರಕಾರ್ಮಿಕ ಎನ್ನುವುದು ಇತ್ತೀಚೆಗೆ ಬಂದಿದ್ದು, ಹಿಂದೆ ಅವರಿಗೆ ಕೆವೊಂದು ಕಡೆ ಭಂಗಿ, ಶೂರ್, ಮಹಾರ್ ಎಂದು ಕರೆಯುತ್ತಿದ್ದರು. 1972 ರಲ್ಲಿ ಕರ್ನಾಟಕದ ಪೌರ ಸಚಿವರಾದ ಬಸವಲಿಂಗಪ್ಪನವರು ಕೇಂದ್ರ ಸರಕಾರದಲ್ಲಿ ಪೌರಕಾರ್ಮಿಕರ ದಿನಾಚರಣೆ ಆಚರಿಸುವ ಕುರಿತು ಚರ್ಚಿಸಿ ಜಾರಿಗೆ ತರಲು ಕಾರಣರಾಗಿದ್ದಾರೆ. ಈ ದಿನ ಪೌರಕಾರ್ಮಿಕರಿಗೆ ಅರಿವು ಮೂಡಿಸುವ ಕಾರ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ನಗರಸಭೆ ಉಪಾಧ್ಯಕ್ಷೆ ಶೋಭಾ ರಾಂ, ಪೌರಕಾರ್ಮಿಕ ಸಂಘದ ಅಧ್ಯಕ್ಷ ಬಸವರಾಜ ನೀಲನಾಯಕ ಸೇರಿದಂತೆ ನಗರಸಭೆ ಸದಸ್ಯರು ಉಪಸ್ಥಿತರಿದ್ದರು.

# ಮುಂದಿನ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ: ಯತ್ನಾಳ



**ಜಮಖಂಡಿ :** ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪವರನ್ನು ರಾಜ್ಯದ ಮುಖ್ಯಮಂತ್ರಿಯನ್ನಾಗಿ ಮಾಡಿಯೇ ತೀರುತ್ತೇವೆಂದು ವಿಜಯಪುರದ ಶಾಸಕ ಬಸವನಗೌಡ ಯತ್ನಾಳ ಹೇಳಿದರು. ತಾಲೂಕಿನ ಜಕನೂರ ಗ್ರಾಮದ ಮಾದಣ್ಣ ಮದಗೊಂಡೇಶ್ವರ ಸಿದ್ಧಾಶ್ರಮದಲ್ಲಿ 29ನೇ ಸಿದ್ಧಸಿರಿಸಂಭ್ರಮ, ಬಂಡಾರ ಸಂಸ್ಕೃತಿ, ಜನಪದ ಹಾಗೂ ಡೊಳ್ಳಿನ ಕಲಾಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆ.ಎಸ್. ಈಶ್ವರಪ್ಪ ಅವರಿಗೆ ಅನ್ಯಾಯವಾಗಿದೆ ಅವರು ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ಮಾಡಿದಾಗ ಅವರಿಗೆ ಆಗಿರುವ ತೊಂದರೆ ನೀಡಲಾಗಿದೆಂಬ ವಿಷಯ ಎಲ್ಲರಿಗೂ ತಿಳಿದಿದೆ. ರಮೇಶ ಜಾರಕಿಹೋಳಿ ಮತ್ತು ಇನ್ನೂ ಹಲವು ಮುಖಂಡರು ಹೊಂದಾಣಿಕೆ ಮಾಡಿಕೊಂಡಿದ್ದೇವೆ. ಸರಿಯಾದ ಸಮಯಕ್ಕೆ ಕಾಯುತ್ತಿದ್ದು ಸಿದ್ಧರಾಮಯ್ಯ ಅವರನ್ನು ಬಿಟ್ಟರೇ ಅವರೇ ಮುಂದಿನ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಆಗಲಿದ್ದಾರೆ ನಾವು ಅವರನ್ನು ಬಿಟ್ಟುಕೊಡುವ ಮಕ್ಕಳಲ್ಲ, ಹುಸಿ ಬಾಂಬ್ ಹಾಕುವ ಜಾಯಮಾನವಲ್ಲ ನಮ್ಮದಲ್ಲ ಎಂದರು.

ಸಿದ್ಧಾಶ್ರಮದ ಮದುಗೊಂಡೇಶ್ವರ ಸ್ವಾಮಿಗಳು ನೇತೃತ್ವದಲ್ಲಿ ಹಮ್ಮಿಕೊಂಡಿದ್ದ 29ನೇ ಸಿದ್ಧಸಿರಿ ಕಾರ್ಯಕ್ರಮದಲ್ಲಿ ಮಾಜಿಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಮತ್ತು ವಿಜಯಪೂರದ ಶಾಸಕ ಬಸನಗೌಡ ಯತ್ನಾಳ ಅವರಿಗೆ ಬೆಳ್ಳಿ ಖಡ್ಗ ನೀಡುವ ಮೂಲಕ ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಮಾಜಿ ಉಪಮುಖ್ಯಮಂತ್ರಿ ಕೆ.ಸ್.ಈಶ್ವರಪ್ಪ, ಪಂಚಮಸಾಲಿ ಪೀಠದ ಜಯಮೃತ್ಯುಂಜಯಶ್ರೀ, ಓಲೇಮಠದ ಡಾ.ಚೆನ್ನಬಸವ ಶ್ರೀ, ಕೊಣ್ಣೂರ ಹೊರಗಿನಮಠದ ಡಾ.ವಿಶ್ವಪ್ರಭುದೇವರು, ಎಂಎಲ್‌ಸಿ ಹಣಮಂತ ನಿರಾಣಿ, ತೌಫಿಕ ಪಾರ್ಥನಳ್ಳಿ, ನಾಗಪ್ಪ ಸನದಿ, ರಾಮಣ್ಣ ಕಡಕೋಳ, ಸೂರಜ ಕುಡ್ರಾಣಿ ಸಹಿತ ಹಲವರು ಇದ್ದರು.

# ಪುರಸಭೆಯ ವಿಶೇಷ ಸಾಮಾನ್ಯ ಸಾಮಾನ್ಯ ಸಭೆ

## 2.34 ಕೋಟಿ ಅಭಿವೃದ್ಧಿ ಕಾಮಗಾರಿಗಳ ಟೆಂಡರ್‌ಗಳಿಗೆ ಅನುಮೋದನೆ



**ಮಹಾಲಿಂಗಪುರ :** ಪುರಸಭೆಯಿಂದ ಕೈಗೊಳ್ಳುವ ಪ್ರತಿಯೊಂದು ಅಭಿವೃದ್ಧಿ ಕಾರ್ಯಗಳಿಗೆ ಪಕ್ಷಾತೀತವಾಗಿ ಪುರಸಭೆಯ ಸರ್ವ ಸದಸ್ಯರ ಸಹಕಾರ ಅಗತ್ಯವಾಗಿದೆ. ನನ್ನ ಅಧ್ಯಕ್ಷ ಅವಧಿಯಲ್ಲಿ ಎಲ್ಲಾ ಸದಸ್ಯರ ಸಲಹೆ ಸೂಚನೆಗಳನ್ನು ಪಡೆದುಕೊಂಡು ಪಟ್ಟಣದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದು ಪುರಸಭೆಯ ಅಧ್ಯಕ್ಷ ಯಲ್ಲನಗೌಡ ಪಾಟೀಲ ಹೇಳಿದರು.

ಸೋಮವಾರ ಪುರಸಭೆಯ ಸಭಾ ಭವನದಲ್ಲಿ ಜರುಗಿದ ವಿಶೇಷ ಸಾಮಾನ್ಯ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ಪಟ್ಟಣದ 23 ವಾರ್ಡಗಳಿಗೆ ಅನ್ವಯವಾಗುವಂತೆ ಒಟ್ಟು 2 ಕೋಟಿ 34 ಲಕ್ಷ ವೆಚ್ಚದ ಅಭಿವೃದ್ಧಿ ಕಾರ್ಯಗಳಿಗೆ ಕರೆದ ಟೆಂಡರ್‌ಗಳಿಗೆ ಸರ್ವಾನುಮತದ ಅನುಮೋದನೆ ನೀಡಲಾಗಿದೆ ಎಂದರು.

ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ ಮಾತನಾಡಿ ಸನ್ 2023–24, 2024–25ನೇ ಸಾಲಿನ ಪುರಸಭೆಯ 15ನೇ ಹಣಕಾಸು, ಎಸ್‌ಎಫ್‌ಸಿ ಮುಕ್ತ ನಿಧಿ ಹಾಗೂ ಸ್ಥಳೀಯ ನಿಧಿಯಲ್ಲಿ ಕರೆದ ಟೆಂಡರ್‌ಗಳಿಗೆ ಕಡಿಮೆ ದರ ಸಲ್ಲಿಸಿದ ಗುತ್ತಿಗೆದಾರರಿಗೆ ದರ ಮಂಜೂರಾತಿ ನೀಡಲಾಗಿದೆ ಎಂದರು.

ಪುರಸಭೆಯ ಕಿರಿಯ ಅಭಿಯಂತರ ಎಸ್.ಎಂ.ಕಲಬುರ್ಗಿ ಮಾತನಾಡಿ 2 ಕೋಟಿ 34 ಲಕ್ಷ ವೆಚ್ಚದ ವಿವಿಧ ಅಭಿವೃದ್ಧಿ ಕಾರ್ಯಗಳ ಪಟ್ಟಿ ಹಾಗೂ ಪ್ರತಿ ವಾರ್ಡಗಳಿಗೆ ಹಂಚಿಕೆ ಮಾಡಿದ ಅನುದಾನ ಹಾಗೂ ಕೆಲಸದ ವಿವರಗಳನ್ನು ಸಭೆಗೆ ತಿಳಿಸಿದರು.

ಸದಸ್ಯರಾದ ಸವಿತಾ ಹುರಕಡ್ಲಿ, ಚಾಂದನಿ ನಾಯಕ, ಬಸವರಾಜ ಹಿಟ್ಟಿನಮಠ, ಶೇಖರ ಅಂಗಡಿ, ಬಸವರಾಜ ಯರಗಟ್ಟಿ ಮಾತನಾಡಿದರು.

ಪುರಸಭೆಯ ಉಪಾಧ್ಯಕ್ಷೆ ಶೀಲಾ ರಾಜೇಶ ಭಾವಿಕಟ್ಟಿ, ಸ್ಥಾಯಿ ಸಮಿತಿ ಚೇರಮನ್ ಅಬ್ದುಲ್ ರಜಾಕ ಬಾಗವಾನ, ಸದಸ್ಯರಾದ ಭಾವನಾ ಪಾಟೀಲ, ಸುಜಾತಾ ಮಾಂಗ, ಸರಸ್ವತಿ ರಾಮೋಜಿ, ಬಲವಂತಗೌಡ ಪಾಟೀಲ, ಮುಸ್ತಾಕ ಚಿಕ್ಕೋಡಿ, ಸಜನಸಾಬ ಪೆಂಡಾರಿ,

ಬಸವರಾಜ ಬುರುಡ, ರಾಜು ಗೌಡಪ್ಪಗೋಳ, ಪುರಸಭೆಯ ವ್ಯವಸ್ಥಾಪಕ ಎಸ್.ಎನ್.ಪಾಟೀಲ, ಕಂದಾಯ ಅಧಿಕಾರಿ ಪಿ.ವೈ.ಸೊನ್ನದ, ಕಿರಿಯ ಆರೋಗ್ಯ ನಿರೀಕ್ಷಕ ಎಂ.ಎಂ. ಮೂಗಳಖೋಡ, ಅಧಿಕಾರಿಗಳಾದ ಸಿ.ಎಸ್.ಮಠಪತಿ, ಸಿದ್ದು ಅಳ್ಳಿಮಟ್ಟಿ, ರಾಜು ಹೂಗಾರ, ಸಿಬ್ಬಂದಿ ರಾಜೇಶ್ವರಿ ಸೋರಗಾಂವಿ, ಲಕ್ಷ್ಮೀಬಾಯಿ ಪರೀಟ, ರಾಮು ಮಾಂಗ, ಮಹಾಲಿಂಗ ಮಾಂಗ ಸೇರಿದಂತೆ ಹಲವರು ಇದ್ದರು.

# ಲೇವಾದೇವಿ/ಗಿರವಿ ಹಾಗೂ ಹಣಕಾಸು ಸಂಸ್ಥೆಗಳ ಗಮನಕ್ಕೆ

**ಬೆಳಗಾವಿ :** ಜಿಲ್ಲೆಯ ಎಲ್ಲ ಲೇವಾದೇವಿ, ಗಿರವಿ ಹಾಗೂ ಹಣಕಾಸು ಸಂಸ್ಥೆಗಳಿಗೆ ಸಂಬಂದಿಸಿದ ನಿಖರವಾದ ಮಾಹಿತಿಯನ್ನು ಸಲ್ಲಿಸಲು ಸಹಕಾರ ಸಂಘಗಳ ನಿಬಂಧಕರು ಸೂಚಿಸಿರುತ್ತಾರೆ.

ಮಾಹಿತಿಯನ್ನು ನಮೂನೆಗಳಲ್ಲಿ ಕ್ರೋಢಿಕರಿಸಿ ನಿಮ್ಮ ವ್ಯಾಪ್ತಿಯ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಗೆ ಖುದ್ದಾಗಿ ಭೇಟಿ ನೀಡಿ ಸಂಸ್ಥೆಯ ವ್ಯವಹಾರಕ್ಕೆಸಂಬಂಧಿಸಿದ ಮಾಹಿತಿಯನ್ನುಕೂಡಲೇ ಸಲ್ಲಿಸಲು ಸೂಚಿಸಿದೆ. ತಪ್ಪಿದ್ದಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಹಾಗೂ ಮಾಹಿತಿ ಸಲ್ಲಿಸಬೇಕಾದ ನಮೂನೆಗಳಿಗಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರಕಚೇರಿಯದೂರವಾಣಿ:88867819522 ಸಂಖ್ಯೆಗೆ ಸಂಪರ್ಕಿಸಲು ಬೆಳಗಾವಿ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಾಗವ್ವಾ ಸಿದ್ದಾಪೂರ ನಿಧನ



**ರಬಕವಿ–ಬನಹಟ್ಟಿ :** ಬನಹಟ್ಟಿಯ ನೀರಿನ ಟಾಕಿಯ ಸದಾಶಿವ ದೇವಸ್ಥಾನ ಹತ್ತಿರದ ನಿವಾಸಿ ಬಾಗವ್ವಾ ಸಿದ್ದಾಪೂರ(80) ನಿಧನರಾದರು. ಮೃತರಿಗೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಳಗವಿದೆ.

# ಪ್ರತಿಭಾ ಕಾರಂಜಿ ಕಲೋತ್ಸವ ಕಾರ್ಯಕ್ರಮ



**ನವಲಗುಂದ :** ಪಟ್ಟಣದ ವಿದ್ಯಾಜ್ಯೋತಿ ಕಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನವಲಗುಂದ 1 ಕ್ಲಸ್ಟರ್ ಮಟ್ಟದ 2024–25ನೇ ಸಾಲಿನ ಪ್ರತಿಭಾ ಕಾರಂಜಿ ಕಲೋತ್ಸವ ಕಾರ್ಯಕ್ರಮವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್ ಬಿ ಮಲ್ಲಾಡ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು ಮಕ್ಕಳಿಗೆ ಪಠ್ಯ ಎಷ್ಟು ಮುಖ್ಯವೊ ಅಷ್ಟೇ ಪಠ್ಯತರ ಚಟುವಟಿಕೆಯು ಬಹಳ ಮುಖ್ಯವಾಗಿದ್ದು ಸರ್ಕಾರ ಇಂತಹ ಕಾರ್ಯಕ್ರಮ ಆಯೋಜನೆ ಮಾಡುವುದರ ಮೂಲಕ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುತ್ತಿದೆ ಎಂದರು.

ಸಮಾಜ ಸೇವಕ ಮಾಬುಸಾಬ ಯರಗುಪ್ಪಿ ವಿದ್ಯಾರ್ಥಿಗಳು ಕೇವಲ ಪಠ್ಯೇಕ್ಕಷ್ಟೇ ಸೀಮಿತರಾಗಬಾರದು. ತಮ್ಮಲ್ಲಿ ಅಡಗಿರುವ ವಿಭಿನ್ನವಾದ ಜ್ಞಾನ, ಕೌಶಲ ತೋರಿಸಲು ಪ್ರತಿಭಾ ಕಾರಂಜಿ ಉತ್ತಮ ಅವಕಾಶ, ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು ಎನ್ನುವ ಹಾಗೆ ಸರ್ಕಾರ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪ್ರತಿಭಾ ಕಾರಂಜಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಇಲ್ಲಿ ಮಕ್ಕಳು ತಮ್ಮಲ್ಲಿರುವ ಕಲೆ, ಸಾಹಿತ್ಯ, ಜಾನಪದ ಪ್ರಕಾರದ ಪ್ರತಿಭೆಯನ್ನು ತೋರಿ ಸಾಂಸ್ಕೃತಿಕವಾಗಿ ಮುಂದೆ ಬರಬೇಕು ಎಂದು ಸಲಹೆ ನೀಡಿದರು.

ವೇದಿಕೆ ಮೇಲಿದ್ದ ಅತಿಥಿಗಳಿಗೆ ವಿದ್ಯಾಜ್ಯೋತಿ ಕಿರಿಯ ಪ್ರಾಥಮಿಕ ಶಾಲೆಯ ಆಡಳಿತ ಮಂಡಳಿಯವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಬಸವರಾಜ ಬಿಲ್ಲಶಿವಣ್ಣವರ, ಶಿಕ್ಷಕರಾದ ಎಸ್. ಎಫ್ ನೀರಲಗಿ, ಎನ್.ವಾಯ್ ಕಳಸಾಪುರ, ಎಂ.ಎನ್ ವಗ್ಗರ, ಗಣೇಶ ಹೊಳೆಯಣ್ಣವರ, ಎನ್. ಎಸ್ ತಾಳಿಕೋಟಿಮಠ, ಎಂ.ಎಚ್ ಚಿಕನಾಳ, ಬಿ.ಎಂ ಯಲಿಗಾರ, ಎಸ್.ಎಫ್ ಈರಡ್ಡಿ, ಎಚ್.ಎಂ ಗುರಾಣಿ, ಭರತೇಶ್ ಕುರುಬರ, ವಾಯ್.ಎಲ್. ಸುಣಗಾರ, ವಿದ್ಯಾಜ್ಯೋತಿ ಕಿರಿಯ ಪ್ರಾಥಮಿಕ ಶಾಲೆಯ ಪ್ರಧಾನ ಶಿಕ್ಷಕಿ ನೀಲಾ ಕುರುಬರ, ನಿವೃತ್ತ ಶಿಕ್ಷಕರಾದ ಎನ್. ಎನ್. ಹಾಲಿಗೇರಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಸ್ವಚ್ಛತೆಯೆಡೆಗೆ ಒಂದು ಹೆಜ್ಜೆ



**ಹುಬ್ಬಳ್ಳಿ :** ಸ್ವಚ್ಛ ಸುಂದರ ರಾಷ್ಟ್ರ ನಿರ್ಮಾಣದ ಪರಿಕಲ್ಪನೆಯೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಅವರು ಕರೆ ಕೊಟ್ಟಿರುವ "ಸ್ವಚ್ಛತಾ ಹೀ ಸೇವಾ" ಅಭಿಯಾನದ ಭಾಗವಾಗಿ ಇಂದು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವತಿಯಿಂದ ನಡೆದ "ಸ್ವಚ್ಛತೆಯೇ ಸೇವೆ –2024" ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿಯವರು ಸಸಿ ನೆಟ್ಟು ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿದರು. ನಮ್ಮ ನಗರದ ಸ್ವಚ್ಛತೆ ನಮ್ಮೆಲ್ಲರ ಕರ್ತವ್ಯವಾಗಿದ್ದು, ಪ್ರಧಾನಮಂತ್ರಿಗಳ ಈ ಕರೆಗೆ ದೇಶಾದ್ಯಂತ ಉತ್ತಮ ಸ್ಪಂದನೆ ಕೂಡ ದೊರಕಿದೆ. ಸಾರ್ವಜನಿಕರು ಕೂಡ ತಮ್ಮ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿಟ್ಟುಕೊಂಡು ಈ ಅಭಿಯಾನದಲ್ಲಿ ಭಾಗವಹಿಸಿ ಮತ್ತು ಇದೇ ಸಂದರ್ಭದಲ್ಲಿ ಪ್ರಧಾನಮಂತ್ರಿಗಳ ಕರೆಯಂತೆ "ಏಕ್ ಪೇಡ್ ಮಾ ನಾಮ್ ? ಅಮ್ಮನ ಹೆಸರಿನಲ್ಲಿ ಒಂದು ಗಿಡ" ಅಭಿಯಾನದ ಭಾಗವಾಗಿ ಗಿಡ ನೆಟ್ಟು ಎಲ್ಲರೂ ಈ ಅಭಿಯಾನದಲ್ಲಿ ಭಾಗಿಯಾಗುವಂತೆ ಕೋರಿದರು. ಕಾರ್ಯಕ್ರಮದಲ್ಲಿ ಶಾಸಕರಾದ ಮಹೇಶ್ ಟೆಂಗಿನಕಾಯಿ, , ಹು–ಧಾ ಮಹಾನಗರ ಪಾಲಿಕೆಯ ಮಹಾಪೌರರಾದ ರಾಮಣ್ಣ ಬಡಿಗೇರ, ಬಿಜೆಪಿ ಜಿಲ್ಲಾಧ್ಯಕ್ಷರಾದ ತಿಪ್ಪಣ್ಣ ಮಜ್ಜಗಿ ಹಾಗೂ ಪಾಲಿಕೆಯ ಸದಸ್ಯರು ಪ್ರಮುಖರು ಉಪಸ್ಥಿತರಿದ್ದರು.

# ಕೃಷಿ ವಿಜ್ಞಾನಿಗಳು ಆತ್ಮಾವಲೋಕನ ಮಾಡಿಕೊಳ್ಳಲಿ



**ಧಾರವಾಡ :** ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಹಾಗೂ ಸಂಶೋಧನೆಗಳು ವೇಗವಾಗಿ ಬಳಕೆಯಾಗುತಿದ್ದರೂ ನಮ್ಮ ದೇಶ ಹಾಗೂ ರಾಜ್ಯದ ಕೃಷಿ ಇಳುವರಿ ಇತರೇ ದೇಶಗಳಿಗೆ ಹೋಲಿಸಿದರೆ ನಿಗದಿತ ಪ್ರಮಾಣದಲ್ಲಿ ಏರಿಕೆಯಾಗದೆ ಇರುವ ಬಗ್ಗೆ ಕೃಷಿ ವಿಜ್ಞಾನಿಗಳು ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ರಾಜ್ಯ ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಸಲಹೆ ನೀಡಿದರು.

ಕೃಷಿ ವಿಶ್ವವಿದ್ಯಾಲಯದಲ್ಲಿ ಇಂದು 24ನೇ ಸಾಲಿನ ಕೃಷಿ ಮೇಳವನ್ನು ಉದ್ಘಾಟಿಸಿ ಹಾಗೂ ಸಾಧಕ ಕೃಷಿಕರಿಗೆ ಪ್ರಶಸ್ತಿ ಪ್ರಧಾನ ಮಾಡಿ ಮಾತನಾಡಿದರು.

ಕೃಷಿ ವಿವಿಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಾರೆ. ಜಿಲ್ಲೆಯ ಒಂದು ಕ್ಷೇತ್ರ, ಹೋಬಳಿಯನ್ನು ಮಾದರಿಯಾಗಿಸಿ ಅಧ್ಯಯನ ಹಾಗೂ ಪ್ರಯೋಗ ಕೈಗೊಳ್ಳಬೇಕು. ಇಂಟಿಗ್ರೇಟೆ–ಡ್ ಕೃಷಿ ಹಾಗೂ ಕ್ಷೇತ್ರ ಭೇಟಿಗೆ ಒತ್ತು ನೀಡಬೇಕೆಂದು ಅವರು ತಿಳಿಸಿದರಲ್ಲದೇ ಕೃಷಿ ಮೇಳದ ಪರಿಣಾಮದ ಅಧ್ಯಯನ ಸಹ ಕೈಗೊಳ್ಳಬೇಕೆಂದು ಅವರು ಹೇಳಿದರು.

ಸಭಾಪತಿ ಬಸವರಾಜ ಹೊರಟ್ಟಿ ಅವರು ಮಾತನಾಡಿ, ಇತ್ತೀಚಿನ ಭಾಷಣಗಳಲ್ಲಿ ಯುವಕರು ಕೃಷಿಯಿಂದ ದೂರವಾಗುತ್ತಿದ್ದು, ಕೃಷಿ ಕಾರ್ಮಿಕರು ದೊರೆಯುತ್ತಿಲ್ಲವೆಂದು ಕಳವಳ ವ್ಯಕ್ತಪಡಿಸಿದರು. ಆಧುನಿಕತೆಯ ತಂತ್ರಜ್ಞಾನ, ಜೀವನಶೈಲಿ, ಪಾರಂಪರಿಕ ಕೃಷಿ ಅವಮಾನ, ಮಾರಾಟ ಸೇರಿದಂತೆ ಅನೇಕ ಜಟಿಲ ಸಮಸ್ಯೆಗಳಿವೆ. ರೈತರ ಮಕ್ಕಳು ಕೃಷಿ ವಿಜ್ಞಾನ ಓದಿದರೂ ಕೃಷಿಕರಾಗುತ್ತಿಲ್ಲ ಕೃಷಿ ವಿವಿ ಸಂಶೋಧನೆಗಳು ರೈತರಿಗೆ ಉಪಯೋಗವಾಗಬೇಕು ಇಂಟಿಗ್ರೇಟೆಡ್ ಕೃಷಿಗೆ ಹೆಚ್ಚು ಹೊತ್ತು ನೀಡಬೇಕೆಂದರು.

ಶಾಸಕ ಎನ್.ಹೆಚ್.ಕೋನರೆಡ್ಡಿ ಮಾತನಾಡಿ, ನಿಸರ್ಗ ಬದಲಾಗುತ್ತಿದೆ ಹವಾಮಾನ ವರದಿಯಿಂದ ಮಳೆ, ಬೆಳೆ ಪರಿಣಾಮವಾಗುತ್ತಿದೆ ಆಧುನಿಕ ತಂತ್ರಜ್ಞಾನ ಉಪಯೋಗಿಸಿ ಪಶುಸಂಗೋಪನೆ ಕಡಿಮೆಯಾಗುತ್ತಿದೆ ರೈತರಿಗೆ ವೈಜ್ಞಾನಿಕ ಬೆಂಬಲ ಬೆಲೆ ದೊರೆಯುತ್ತಿಲ್ಲ ಎಂದರು. ರೈತರಿಗೆ ಕೃಷಿ ವಿವಿ ಪವಿತ್ರಸ್ಥಾನ ಇಲ್ಲಿ ನಡೆಯುವ ಸಂಶೋಧನೆಗಳು ರೈತರಿಗೆ ಮಾರ್ಗದರ್ಶನವಾಗಬೇಕು ವಿಜ್ಞಾನಿಗಳು ರೈತರ ಹತ್ತಿರ ಹೋಗಬೇಕು ಎಲ್ಲವೂ ಹೈಬ್ರಿಡ್ ಮಯವಾಗಿವೆ. ದೇಶಿ ಪಾರಂಪರಿಕ ಬೆಳಗೆ ಹಾಗೂ ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡಬೇಕೆಂದರು.

ಶಾಸಕ ಹಾಗೂ ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಅಬ್ಬಯ್ಯ ಪ್ರಸಾದ ಮಾತನಾಡಿ, ಹವಾಮಾನ ವೈಪರಿತ ನಿರ್ವಹಣೆಯಲ್ಲಿ ಕೃಷಿ ವಿಜ್ಞಾನಗಳು ರೈತರಿಗೆ ಕಾಲಕಾಲಕ್ಕೆ ಸರಿಯಾದ ಮಾರ್ಗದರ್ಶನ ಮಾಡಬೇಕೆಂದರು. ಹೊಸ ಹೊಸ ತಳಿಗಳು, ನೂತನ ಆವಿಷ್ಕಾರಗಳು, ತಂತ್ರಜ್ಞಾನಗಳು ಲಕ್ಷಾಂತರ ರೈತರಿಗೆ ಉಪಯೋಗವಾಗಬೇಕು. ಸ್ವಾತಂತ್ರ್ಯ ನಂತರ ದಿನಗಳಲ್ಲಿ ಹಸಿರು ಕ್ರಾಂತಿಯಾಗಿ ಆರು ಉತ್ಪಾದನೆಯಲ್ಲಿ ಕ್ರಾಂತಿಯ ಉಂಟಾಗಿ ದೇಶವು ರಫ್ತು ಮಾಡುವ ಸ್ಥಿತಿಗೆ ಬಂದಿದೆ. ಇಂದು ಅತಿವೃಷ್ಟಿ, ಅನಾವೃಷ್ಟಿಯಿಂದ ರೈತರಿಗೆ ತೊಂದ–ರೆಯಾಗುತ್ತಿದೆ. ಗಾಳಿ, ನೀರು, ಆಹಾರ ಕಲುಷಿತಗೊಂಡಿದೆ.

ಅದರಿಂದ ಸಾವಯವ ಕೃಷಿಗೆ ಹಾಗೂ ದೇಶ ಬೆಳೆಗಳಿಗೆ ಸಿರಿಧಾನ್ಯಗಳಿಗೆ ಹೆಚ್ಚಿನ ಹೊತ್ತು ನೀಡಬೇಕು, ನೀರು ಮಣ್ಣು ಸಂರಕ್ಷಣೆ ಆಗಬೇಕೆಂದು ನುಡಿದರು.

ಮೈಸೂರಿನ ಮಿನರಲ್ಸ್ ನಿಗಮದ ಅಧ್ಯಕ್ಷರು ಹಾಗೂ ಶಾಸಕರಾದ ಜಿ.ಎಸ್. ಪಾಟೀಲ, ಕೃಷಿ ವಿವಿಯ ಕುಲಪತಿ ಡಾ. ಪಿ.ಎಲ್. ಪಾಟೀಲ. ಜಿಲ್ಲಾಧಿಕಾರಿ ದಿವ್ಯ ಪ್ರಭು ಸೇರಿದಂತೆ ಕೃಷಿ ವಿವಿಯ ಆಡಳಿತ ಮಂಡಳಿಯ ಸದಸ್ಯರು ಹಾಗೂ ವಿವಿಧ ಗಣ್ಯಮಾನ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಪ್ರಕಾಶ ಕಮ್ಮಾರಗೆ ಛಾಯಾಶ್ರೀ ಪ್ರಶಸ್ತಿ



**ಮುನವಳ್ಳಿ :** ತಾಲೂಕಾ ಪೋಟೋಗ್ರಾಪರ&ವಿಡಿಯೋಗ್ರಾಪರ ಸಂಘದ ಮಾಜಿ ಕಾರ್ಯದರ್ಶಿ,ಛಾಯಾಗ್ರಾಹಕ ಮತ್ತು ಪತ್ರಕರ್ತರಾದ ಪ್ರಕಾಶ ಕಮ್ಮಾರ ಅವರಿಗೆ ಹಲವಾರು ವರ್ಷಗಳ ಛಾಯಾಗ್ರಹಣ ಕ್ಷೇತ್ರ ಮತ್ತು ಸಮಾಜ ಸೇವೆ ಪರಿಗಣಿಸಿ ಕರ್ನಾಟಕ ಫೋಟೋಗ್ರಾಫಿ ಅಸೋಸಿಯೇಷನ್ ಬೆಂಗಳೂರು ಇವರಿಂದ ಕೊಡಮಾಡುವ ರಾಜ್ಯಮಟ್ಟದ ಛಾಯಾಶ್ರೀ ಪ್ರಶಸ್ತಿ ಬೆಂಗಳೂರಿನ ತ್ರಿಪುರವಾಸಿನಿ ಅರಮನೆ ಮೈದಾನದಲ್ಲಿ ಕರ್ನಾಟಕ ಪೋಟೋಗ್ರಾಫಿ ಅಸೋಸಿಯೇಷನ್ ದಶಮಾನೋತ್ಸವ ಮತ್ತು ಡಿಜಿ ಇಮೇಜ 2024 ರ ಕಾರ್ಯಕ್ರಮದಲ್ಲಿ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷ್ಯ ಎಚ್ ಎಸ್ ನಾಗೇಶ, ರಾಜ್ಯಕಾರ್ಯದರ್ಶಿ ಎ ಎಂ ಮುರಳಿ, ನಿರ್ದೇಶಕ ಮಲ್ಲಿಕಾರ್ಜುನ ಕೆಆರ್, ಬೆಳಗಾವಿ ಸಂಘದ ಜಿಲ್ಲಾ ಅಧ್ಯಕ್ಷ ಬಸವರಾಜ ರಾಮಣ್ಣವರ, ನಿರ್ದೇಶಕ ಭವಿಷ ಈಟಿ, ಬೈಲಹೊಂಗಲ ಸಂಘದ ತಾಲೂಕಾಅಧ್ಯಕ್ಷ ರಾಜು ಚಿತ್ರಗಾರ, ಉಪಾಧ್ಯಕ್ಷ ನಾಗರಾಜ ಭಾವಿಕಟ್ಟಿ, ಚನ್ನಪ್ಪ ಪನದಿ, ಈರಣ್ಣ ಪ್ರಭುನವರ, ಬಸವರಾಜ ಹುಕ್ಕೇರಿ, ಶಿವು ಅಬ್ಬಾರ ಮುಂತಾದವರು ಉಪಸ್ಥಿತರಿದ್ದರು.

# ತುಂಗಭದ್ರಾ ಜಲಾಶಯದ ಗೇಟ್‌ಗಳ ಬದಲಾವಣೆಗೆ ಒತ್ತು: ಡಿ.ಕೆ. ಶಿವಕುಮಾರ



**ಕೊಪ್ಪಳ :** ತುಂಗಭದ್ರಾ ಜಲಾಶಯದ ಎಲ್ಲ ಗೇಟ್‌ಗಳನ್ನು ಬದಲಾವಣೆ ಮಾಡಲು ಈಗಾಗಲೇ ತಾಂತ್ರಿಕ ತಂಡ ರಚಿಸಲಾಗಿದೆ. ತುಂಗಭದ್ರಾ ಆಣೆಕಟ್ಟಿನ ರಕ್ಷಣೆ ನಮ್ಮ ಆದ್ಯ ಕರ್ತವ್ಯವಾಗಿದೆ ಎಂದು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಆಗಿರುವ ಉಪ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಕೊಪ್ಪಳ ತಾಲೂಕಿನ ಮುನಿರಾಬಾದ್ ಹೈಸ್ಕೂಲ್ ಆವರಣದಲ್ಲಿ ಜಲಸಂಪನ್ಮೂಲ ಇಲಾಖೆ ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಸೆ.22ರಂದು ಹಮ್ಮಿಕೊಂಡಿದ್ದ, ತುಂಗಭದ್ರಾ ಆಣೆಕಟ್ಟಿನ ಗೇಟ್‌ನ್ನು ವಾರದೊಳಗೆ ನಿರ್ಮಿಸಿ, ಅಳವಡಿಸಿದ ಅಧಿಕಾರಿಗಳು, ತಂತ್ರಜ್ಞರು, ಸಿಬ್ಬಂದಿಗಳು ಹಾಗೂ ಗೇಟ್ ನಿರ್ಮಾಣ ಸಂಸ್ಥೆಯ ಪ್ರತಿನಿಧಿಗಳಿಗೆ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ತುಂಗಭದ್ರಾ ಜಲಾಶಯಕ್ಕೆ ಪರ್ಯಾಯವಾಗಿ ಸಮನಾಂತರ ಜಲಾಶಯ ನಿರ್ಮಾಣ ಅತ್ಯವಶ್ಯವಾಗಿದ್ದು, ನವಲಿ ಸಮನಾಂತರ ಜಲಾಶಯಕ್ಕಾಗಿ ಸುಮಾರು 15 ಸಾವಿರ ಎಕರೆ ಜಮೀನು ಬೇಕಾಗುತ್ತದೆ. ಇದಕ್ಕಾಗಿ ರೈತರು ಸಹಕರಿಸಬೇಕು ಎಂದರು.

ಗಂಗಾ ಸ್ನಾನಂ ತುಂಗಾ ಪಾನಂ ಎಂಬ ಮಾತಿನಂತೆ ತುಂಗಾ ನದಿಯ ನೀರು ಪವಿತ್ರವಾಗಿದೆ. ಆಣೆಕಟ್ಟುಗಳು ಆಧುನಿಕ ಭಾರತದ ದೇವಾಲಯಗಳಾಗಿವೆ ಎಂದು ಜವಾಹರಲಾಲ್‌ನೆಹರುರವರುತಿಳಿಸಿದ್ದಾರೆ. ಈ ಭಾಗದ ರೈತರ ಜೀವ ಜಲ ತುಂಗಭದ್ರಾ ಆಣೆಕಟ್ಟಿನ ಕ್ರೆಸ್ಟ್ ಗೇಟ್ ಚೈನ್ ಲಿಂಕ್ ಕಟ್ ಆದಾಗ ರೈತರು ಆತಂಕದಲ್ಲಿದ್ದರು. ಸರ್ಕಾರ ರೈತರ ಬೆನ್ನಿಗೆ ನಿಂತು ಸ್ಟಾಪ್ ಗೇಟ್ ಅಳವಡಿಸಿ,ನೀರನ್ನುಸಂರಕ್ಷಿಸಿದ್ದೇವೆ. ಸ್ಟಾಪ್‌ಗೇಟ್ ಅಳವಡಿಕೆಗಾಗಿ ಅಧಿಕಾರಿಗಳು, ತಂತ್ರಜ್ಞರು, ಸಿಬ್ಬಂದಿ ಹಾಗೂ ಗೇಟ್ ನಿರ್ಮಾಣ ಸಂಸ್ಥೆಯ ಪ್ರತಿನಿಧಿಗಳು ಶ್ರಮಿಸಿದ್ದು, ಅವರೆಲ್ಲರ ಸಾಧನೆಗೆ ಸರ್ಕಾರ ಅಭಿನಂದಿಸುತ್ತಿದೆ ಎಂದು ಹೇಳಿದರು.

ರಾಜ್ಯದ ಕೆ.ಆರ್.ಎಸ್., ಆಲಮಟ್ಟಿ ಅಣೆಕಟ್ಟುಗಳಿಗೆ ಈಗಾಗಲೇ ಬಾಗಿನ ಅರ್ಪಣೆ ಮಾಡಿದ್ದೇವೆ. ಈಗ ತುಂಗಭದ್ರಾ ಜಲಾಶಯಕ್ಕೂ ಬಾಗಿನ ಅರ್ಪಿಸಲಾಗಿದೆ. ರೈತರುಬೆಳೆಗಳರಕ್ಷಣೆಗೆಅವಶ್ಯವಿರುವನೀರನ್ನು ಒದಗಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ್ ತಂಗಡಗಿ ಅವರು ಮಾತನಾಡಿ, ಈ ಭಾಗಕ್ಕೆ ಸೆ.22 ಸಂಭ್ರಮದ ದಿನವಾಗಿದೆ. ಮುರಿದುಹೋದ ಕ್ರೆಸ್ಟ್ ಗೇಟ್ ದುರಸ್ತಿಗೆ ಸರ್ಕಾರವು ತ್ವರಿತವಾಗಿ ಕ್ರಮ ಕೈಗೊಂಡು ನೀರನ್ನು ಉಳಿಸುವಂತಹ ಕೆಲಸ ಮಾಡಿದೆ. ಇದಕ್ಕಾಗಿ ಶ್ರಮಿಸಿದ ಅಧಿಕಾರಿಗಳು, ತಂತ್ರಜ್ಞರು, ಸಿಬ್ಬಂದಿಗಳು ಹಾಗೂ ಗೇಟ್ ನಿರ್ಮಾಣ ಸಂಸ್ಥೆಯ ಪ್ರತಿನಿಧಿಗಳಿಗೆ ಸನ್ಮಾನಿಸಿ ಅಭಿನಂದಿಸಲಾಗುತ್ತಿದೆ ಎಂದರು. ತುಂಗಭದ್ರಾ ಜಲಾಶಯವು ಈ ಭಾಗದ ರೈತರ ಜೀವನಾಡಿಯಾಗಿದ್ದು, ಆಣೆಕಟ್ಟಿನ ಎಲ್ಲಾ 33 ಕ್ರೆಸ್ಟ್ ಗೇಟ್‌ಗಳ ಬದಲಾವಣೆ ಆಗಬೇಕಿದೆ ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ್ ಅವರು ಮಾತನಾಡಿ, ತುಂಗಭದ್ರಾ ಜಲಾಶಯದ ಕ್ರೆಸ್ಟ್ ಗೇಟ್–19ರ ಚೈನ್ ಲಿಂಕ್ ಕಟ್‌ಆಗಿ ನೀರು ಪೋಲಾಗುತ್ತಿತ್ತು. ಇದರಿಂದ ರೈತರು ಆತಂಕ ಪಡುತ್ತಿದ್ದರು. ಮುಖ್ಯ ಮಂತ್ರಿಗಳು, ಉಪಮುಖ್ಯಮಂತ್ರಿಗಳು,ಸಚಿವರುರೈತರಿಗೆ ಧೈರ್ಯ ತುಂಬಿ ದುರಸ್ತಿ ಕಾರ್ಯವು ಶೀಘ್ರ ಪೂರ್ಣಗೊಳ್ಳಲಿದೆ ಎಂದು ಭರವಸೆ ನೀಡಿ–ದ್ದರು. ಅದರಂತೆ ಗೇಟ್ ಅಳವಡಿಕೆ ಕಾರ್ಯ ಯಶಸ್ವಿಯಾಯಿತು. ಇದರ ಫಲವಾಗಿ ಈಗ ಸುಮಾರು 102 ಟಿಎಂಸಿ ನೀರನ್ನು ರಕ್ಷಿಸಲಾಗಿದೆ ಎಂದರು.\

ನಮ್ಮ ಸರ್ಕಾರವು ಬಡವರಿಗಾಗಿ ಐದು ಗ್ಯಾರಂಟಿ ಯೋಜನೆಗಳನ್ನುಯಥಾವತ್ತಾಗಿ ಜಾರಿ ತಂದಿದೆ. ಅಳವಂಡಿ–ಬೆಟಗೇರಿ, ಸಿಂಗಟಾಲೂರು, ಬಹದ್ದೂರ್ ಬಂಡಿ ಏತ ನೀರಾವರಿ ಯೋಜನೆಗಳನ್ನು ಜಾರಿಗೆ ಮಾಡಬೇಕು. ಕೊಪ್ಪಳ ಜಿಲ್ಲೆಗೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನೀಡಬೇಕು ಹಾಗೂ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ನಿರ್ಮಾಣವಾಗಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಸಮಾರಂಭದಲ್ಲಿ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ, ವಸತಿ, ವಕ್ಸ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ವಿಜಯನಗರ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್, ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್. ಎಸ್.ಬೋಸರಾಜು, ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ವಿಧಾನಸಭಾ ಕ್ಷೇತ್ರ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ, ಮಾನ್ಯ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗು ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರಡ್ಡಿ, ಕರ್ನಾಟಕ ರಾಜ್ಯ ಕೈಗಾರಿಕ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಸಿಂಧನೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ಕಂಪ್ಲಿ ವಿಧಾನಸಭಾ ಕ್ಷೇತ್ರ ಶಾಸಕರಾದ ಜೆ.ಎನ್.ಗಣೇಶ, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರು ಹಾಗೂಮಸ್ಕಿವಿಧಾನಸಭಾಕ್ಷೇತ್ರಶಾಸಕರಾದ ಆರ್.ಬಸನಗೌಡ ತುರುವಿಹಾಳ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಅಧ್ಯಕ್ಷರು ಹಾಗೂ ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರ ಶಾಸಕರಾದ ಬಸನಗೌಡ ದದ್ದಲ್, ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಬಳ್ಳಾರಿ ಸಂಸದರಾದ ಈ.ತುಕಾರಾಂ, ದಾವಣಗೆರೆ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ, ರಾಯಚೂರು ಸಂಸದರಾದಜಿ.ಕುಮಾರ್‌ನಾಯಕ,ಕೂಡ್ಲಿಗಿ ಶಾಸಕರಾದ ಡಾ ಶ್ರೀನಿವಾಸ್ ಎನ್.ಟಿ., ಹೂವಿನಹಡಗಲಿ ಶಾಸಕರಾದ ಎಲ್.ಕೃಷ್ಣ ನಾಯಕ, ಹರಪ್ಪನಹಳ್ಳಿ ಶಾಸಕರಾದ ಎಂ.ಪಿ ಲತಾ ಮಲ್ಲಿಕಾರ್ಜುನ್, ವಿಧಾನ ಪರಿಷತ್ ಸದಸ್ಯರುಗಳಾದ ಬಸನಗೌಡ ಬಾದರ್ಲಿ, ತುಂಗಭದ್ರ ಯೋಜನೆ ಮುನಿರಾಬಾದ್ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹಸನ್‌ಸಾಬ್ ನಬೀಬ್ ಸಾಬ್ ದೋಟಿಹಾಳ, ಹೊಸಪೇಟೆಯ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾದ ಎಚ್.ಎನ್.ಎಫ್ ಮಹಮದ್ ಇಮಾಮ್ ನಿಯಾಜಿ, ಹೊಸಪೇಟೆ ನಗರಸಭೆ ಅಧ್ಯಕ್ಷರಾದ ರೂಪೇಶ್ ಕುಮಾರ್ ಎನ್., ವಿಶೇಷ ಆಹ್ವಾನಿತರಾಗಿ ಕೃಷ್ಣಭಾಗ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ.ಮೋಹನ್ ರಾಜ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಕೃಷ್ಣ ಭಾಜಪೇಯಿ, ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಎಂ.ಎಸ್.ದಿವಾಕರ, ಕೊಪ್ಪಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ವಿಜಯನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೋಂಗ್ಜಾಯ ಮೋಹಮ್ಮದ್ ಅಲಿ ಅಕ್ರಮ್ ಷಾ, ಬಳ್ಳಾರಿ ವಲಯದ ಪೊಲೀಸ್ ಮಹಾ ನಿರೀಕ್ಷಕರಾದ ಬಿ.ಎಸ್. ಲೋಕೇಶ್ ಕುಮಾರ್, ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ ರಾಮ್ ಎಲ್. ಅರಸಿದ್ದಿ, ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು ಬಿ.ಎಲ್., ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳಾದ ಕೃಷ್ಣಮೂರ್ತಿ ಬಿ.ಕುಲಕರ್ಣಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ ವ್ಯವಸ್ಥಾಪಕ ನಿರ್ದೇಶಕರಾದ ರಾಜೇಶ ಅಮ್ಮನಬಾವಿ, ತುಂಗಭದ್ರಾ ಬೋರ್ಡ್ ಕಾರ್ಯದರ್ಶಿಗಳಾದ ಒ.ಆರ್.ಕೆ. ರೆಡ್ಡಿ, ಕ.ನೀ.ನಿ.ನಿ, ನೀ.ಕೇ.ವ. ಮುನಿರಾಬಾದ್ ಮುಖ್ಯ ಅಭಿಯಂತರರಾದ ಹನುಮಂತ ಜಿ ದಾಸರ, ಮುನಿರಾಬಾದ್ ತುಂಗಭದ್ರ ಯೋಜನ ವೃತ್ತದ ಅಧೀಕ್ಷಕ ಅಭಿಯಂತರರಾದ ಎಲ್.ಬಸವರಾಜ್, ತುಂಗಭದ್ರಾ ಬೋರ್ಡ್ ಅಧೀಕ್ಷಕ ಅಭಿಯಂತರರಾದ ಶ್ರೀಕಾಂತ್ ರೆಡ್ಡಿ, ರಾಯಚೂರು ಜಿಲ್ಲೆಯ ಯರಮರಸ್ ಕ್ಯಾಂಪ್ ತುಂಗಭದ್ರ ಕಾಲುವೆ ನಿರ್ಮಾಣ ವೃತ್ತದ ಅಧೀಕ್ಷಕ ಅಭಿಯಂತರರಾದ ಕೆ.ಬಿ.ಹೆಚ್ ಶಿವಶಂಕರ್, ಮುನಿರಾಬಾದ್ ಕ.ನೀ.ನಿ.ನಿ ನಂ.1 ತುಂಗಭದ್ರಾ ಜಲಾಶಯ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ಗಿರೀಶ್ ಸಿ ಮೇಟಿ, ತುಂಗಭದ್ರಾ ಬೋರ್ಡ್ ಕಾರ್ಯಪಾಲಕ ಅಭಿಯಂತರರಾದ ಜಿ.ಟಿ. ರವಿಚಂದ್ರ, ಮುನಿರಾಬಾದ್ ಕ.ನೀ.ನಿ.ನಿ ಮುಖ್ಯ ಕಾಮಗಾರಿ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಧರ್ಮರಾಜ ಎಲ್ ಹಾಗೂ ಹಾಗೂ ಎಲ್ಲಾ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ಉಪಸ್ಥಿತರಿದ್ದರು.

# ಶಿಕ್ಷಕ ಅಜರ ಮುಲ್ಲಾಗೆ ಮಾಜಿ ಶಾಸಕ ಡೊಂಗರಗಾಂವರಿಂದ ಸನ್ಮಾನ



**ಅಥಣಿ :** ಇತ್ತೀಚೆಗೆ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಜಯಸಿಂಗಪುರದಲ್ಲಿ ಜರುಗಿದ ಎಂ ಜಿ ಪಟೇಲ್ ನ್ಯಾಶನಲ್ ಬೆಸ್ಟ್ ಟೀಚರ್ ಅವಾರ್ಡ್ ಸ್ವೀಕರಿಸಿದ ಸ್ಥಳೀಯ ಉಲ್ಫತ್ ಉರ್ದು ಶಾಲೆಯ ಮುಖ್ಯ ಶಿಕ್ಷಕ ಅಜರ ಮುಲ್ಲಾ ಅವರಿಗೆ ಮಾಜಿ ಶಾಸಕ ಶಹಾಜಹಾನ ಡೊಂಗರಗಾಂವ ತಮ್ಮ ನಿವಾಸಕ್ಕೆ ಬರಮಾಡಿಕೊಂಡು ಗೌರವಪೂರ್ವಕವಾಗಿ ಸನ್ಮಾನಿಸಿ ಗೌರವಿಸಿದರು.

ಈ ವೇಳೆ ಮಾಜಿ ಶಾಸಕ ಶಹಾಜಹಾನ ಡೊಂಗರಗಾಂವ ಮಾತನಾಡಿ ಮುಸ್ಲಿಂ ಸಮಾಜದಲ್ಲಿ ಶಿಕ್ಷಣದ ಕೊರತೆಯಿದೆ. ಮುಸ್ಲಿಂ ಬಾಂಧವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವ ಮೂಲಕ ದೇಶದ ಮುಖ್ಯ ವಾಹಿನಿಗೆ ತರುವ ಪ್ರಯತ್ನ ಮಾಡಬೇಕು. ಇಂದಿನ ದಿನಮಾನಗಳಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕಾಗಿದೆ ಈ ನಿಟ್ಟಿನಲ್ಲಿ ಮುಸ್ಲಿಂ ಬಾಂಧವರು ತಮ್ಮ ಮಕ್ಕಳಿಗೆ ಹೆಣ್ಣು ಗಂಡು ಎಂಬ ಭೇದ ಭಾವ ಇಲ್ಲದೇ ಸರ್ವರಿಗೂ ಶಿಕ್ಷಣ ಪಡೆಯಲು ಶ್ರಮಿಸಬೇಕು ಎಂದು ಕರೆ ನೀಡಿದರು.

ಈ ವೇಳೆ ಸನ್ಮಾನ ಸ್ವೀಕರಿಸಿದ ಅಜರ ಮುಲ್ಲಾ ಮಾತನಾಡಿ ಶೈಕ್ಷಣಿಕವಾಗಿ ಹಿಂದುಳಿದಿರುವ ಮುಸ್ಲಿಂ ಬಾಂಧವರು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕಾಗಿದೆ ಮಾಜಿ ಶಾಸಕರಾದ ಶಹಾಜಹಾನ ಡೊಂಗರಗಾಂವ ಅವರ ಅಧಿಕಾರ ಅವಧಿಯಲ್ಲಿ ತಾಲೂಕಿನಲ್ಲಿ 5 ಸರ್ಕಾರಿ ಉರ್ದು ಶಾಲೆಗಳು ಮಂಜೂರು ಮಾಡಿ ಪ್ರಾರಂಭಿಸಿದ್ದರು ಹಾಗಾಗಿ ಅಥಣಿ ತಾಲೂಕಿನ ಮುಸ್ಲಿಂ ಬಾಂಧವರಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿತ್ತು. ಶಿಕ್ಷಣ–ಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಮುಸ್ಲಿಂ ಸಮಾಜ ಬಾಂಧವರು ತಮ್ಮ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಮುಂದಾಗಬೇಕು ಎಂದರು

ಈ ವೇಳೆ ನಿವೃತ್ತಿ ಎಎಸ್ ಐ ರಿಯಾಜ ಮುಲ್ಲಾ ರಾಜು ಕಾವೇರಿ. ಯಾಸೀನ್ ಝಾರೆ. ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ತೋಟಗಾರಿಕೆ ಯಾಂತ್ರಿಕರಣ ಕಾರ್ಯಕ್ರಮದಡಿ ಅರ್ಜಿ ಆಹ್ವಾನ

**ಬೆಳಗಾವಿ :** ಪ್ರಸ್ತಕ ಸಾಲಿನ ೨೦೨೪-೨೫ ಯೋಜನೆಯ ತೋಟಗಾರಿಕೆ ಯಾಂತ್ರಿಕರಣ ಕಾರ್ಯಕ್ರಮದಡಿ ರೈತರು ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಭೂಮಿ ಸಿದ್ಧತೆ, ಬೆಳೆ ಕಟಾವು ಹಾಗೂ ಬೆಳೆ ಕಟಾವಿನ ನಂತರ ಉಪಯೋಗಿಸುವ ವಿವಿಧ ಅನುಮೋದಿತ ಯಂತ್ರೋಪಕರಣಳನ್ನು ಖರೀದಿಸಲು ಅರ್ಜಿ ಆಹ್ವಾನಿಸಲಾಗಿದೆ.

ಔಷಧಿ ಸಿಂಪರಣೆ ಮಾಡುವ ಯಂತ್ರ, ಕಸ ತೆಗೆಯುವ ಯಂತ್ರ, ಉಳಿಮೆ ಮಾಡುವ ಯಂತ್ರ, ಬೆಳೆ ಕಟಾವು ಯಂತ್ರಗಳು, ಸಾವಯವ ಅವಶೇಷ ಕತ್ತರಿಸುವ ಯಂತ್ರ, ಚೈನ್‌ಸಾ, ತೆಂಗಿನ ಮರ ಹತ್ತುವ ಯಂತ್ರ, ಅರಿಷಿಣ ಕುದಿಸುವ ಯಂತ್ರ, ರೊಟೊವೆಟರ್, ಮೋಹಕ ಬಲೆ, ಗುಂಡಿ ತೆಗೆಯುವ ಯಂತ್ರ, ಟ್ರ್ಯಾಕ್ಟರ್, ಟ್ರ್ಯಾಕ್ಟರ್ ಟ್ರಾಲಿ, ಸೋಲಾರ್ ಪಂಪಸೆಟ್ ಹಾಗೂ ಇತ್ಯಾದಿ ಯಂತ್ರೋಪಕರಣಗಳಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ, ಸಣ್ಣ ಮತ್ತು ಅತೀಸಣ್ಣ ಹಾಗೂ ಮಹಿಳಾ ಫಲಾನುಭವಿಗಳಿಗೆ ಶೇ 50 ರಷ್ಟು ಸಹಾಯಧನ ಹಾಗೂ ಇತರೆ ವರ್ಗದ ರೈತರಿಗೆ ಶೇ.40 ರಷ್ಟು ಸಹಾಯಧನ SMAM ಯೋಜನೆಯ ಸಹಾಯಧನ ಮಿತಿಯಲ್ಲಿ ನೀಡುವ ಸೌಲಭ್ಯಗಳಾಗಿವೆ.

ಆಸಕ್ತ ರೈತರು ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕು ಹಾಗೂ ಹೋಬಳಿ ಮಟ್ಟದ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಿ ಕಾರ್ಯಾದೇಶಗಳನ್ನು ಪಡೆದ ನಂತರ ಯಂತ್ರೋಪಕರಣಗಳನ್ನು ಅನುಮೋದಿತ ಸಂಸ್ಥೆಗಳಿಂದ ಖರೀದಿಸಬಹುದಾಗಿದೆ ಎಂದು ಬೆಳಗಾವಿ ಜಿ.ಪಂ ತೋಟಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# “ಬಿಳಿ ಹಾಳೆಯ ಗತ್ತು ಕೆಂಪು ಶಾಹಿಯ ಕರಾಮತ್ತು”

**ಬಿಳಿಯ ಹಾಳೆಯ ಮೇಲೆ ಅರಳಿದ**
**ಕೆಂಪು ಶಾಹಿಯ ಕರಾಮತ್ತು**
**ಅಂತರ್ಯಾದಿ ಮೂಡುವ ಪ್ರಶ್ನೆಗಳಿಗೆ**
**ಚಂದಿದೆ ಉಸುರಿಸೊ ಗಮ್ಮತ್ತು....**

ಸ್ವಚ್ಛಂದ ಮನವೆಂಬ ಬಿಳಿ ಹಾಳೆಯ ಮೇಲೆ ನಮೂದಿಸಿರುವ ಆಸೆ, ಅಪೇಕ್ಷೆ, ಸಮೀಕ್ಷೆ,ನಿರೀಕ್ಷೆ, ಪರೀಕ್ಷೆ ,ನಿವೇದನೆ,ಸಂವೇದನೆಗಳೆಂಬಪ್ರಶ್ನೆಗಳಮೌಲ್ಯಾಂಕವನ್ನು ಸಾಕಲ್ಯವೆಂಬ ಕೆಂಪು ಶಾಹಿಯ ಅಳತೆಗೋಲಿನ ಮೂಲಕ ಪಕ್ವತೆಯುಳ್ಳ ಸ್ಪಷ್ಟ ಹಾಗು ಉತ್ತರ ನೀಡಿರುವುದನ್ನು ಶ್ರೀಮತಿ ಡಿ ಶಬ್ರಿನಾ ಅಹಮದ್ ಅಲಿ ಕವಯತ್ರಿಯವರ ಕವನಸಂಕಲನದ ತುಂಬೆಲ್ಲ ನೋಡಬಹುದಾಗಿದೆ ಹಾಗೆಯೆ ಓದಿ ಅರ್ಥೈಸಿಕೊಳ್ಳಬಹುದಾಗಿದೆ.ನಾ ಕಂಡಂತೆ ಇವರೊಬ್ಬ ಅದ್ಭುತ ವಾಕ್ಚತುರ್ಯವುಳ್ಳ ದಿಟ್ಟ ಮಹಿಳೆ.ಪುಸ್ತಕ ಪ್ರೇಮಿ, ಬರೆಯುವುದಕ್ಕಿಂತ ಓದು ಇವರ ಪ್ರಿಯ ಹವ್ಯಾಸವೆಂದರೆ ತಪ್ಪಾಗಲಾರದು.ಅಪ್ಪಟ ಕನ್ನಡದ ಕೂಸು ನಿರರ್ಗಳ ಮಾತುಗಾರ್ತಿ.ನಾನು ಕೂಡ ಅವರ ಮಾತಿಗೆ ಚಕಿತಗೊಂಡಿರುವುದುಂಟು.ಈ ಕವಯತ್ರಿಗೆ ವಿಚಾರಗಳ ಸ್ಪಷ್ಟತೆಯ ಬಗ್ಗೆ ಅರಿವಿದ್ದು; ಇವರ ಮಾತಿನಲ್ಲಿ ನಿರರ್ಗಳತೆಯಿದೆ.ಮಾತಿನಲ್ಲಷ್ಟೆಯಲ್ಲದೆ ಬರೆಹದಲ್ಲೂ ಕೂಡ ತಮ್ಮ ಅದ್ಭುತವಾದ ಛಾಪನ್ನು ಮೂಡಿಸಿರುವುದನ್ನು ನಾ ನೋಡುತ್ತಲೆ ಬಂದಿರುವೆ.

ಇವರಂತು ಪಾದರಸದಂತೆ ಚುರುಕು,ಒಳಿತಾಗಲಿ ಇವರ ಭವಿಷ್ಯದ ಬದುಕು.ಈ ಕವನಸಂಕಲನದ ಹೆಸರೆ ಒಂಥರ ವಿಶೇಷ ಹಾಗು ಪರಿಪೂರ್ಣತೆಯಿಂದ ಕೂಡಿದೆ.ಈ ಶೀರ್ಷಿಕೆಯ ಒಳಹೊಕ್ಕಿದಾಗಷ್ಟೆ ಕವನಗಳ ಸಾರ ಅನಾವರಣಗೊಳ್ಳುವುದು.ಈ ನಿಟ್ಟಿನಲ್ಲಿ ನೋಡುವುದಾದರೆ ಯಾವುದೆ ಒಬ್ಬ ಬರೆಹಗಾರನಿಗೆ ತನ್ನ ಸುತ್ತಮುತ್ತಲಿನ ಘಟನೆಗಳು, ಸಂಗತಿಗಳ ಬಗ್ಗೆ ನೈಜತೆಯ ಅರಿವಿರಬೇಕಾದುದ್ದು ಅವಶ್ಯಕ.ಕಾರಣ 'ಸುಳ್ಳೆಂಬ ದರ್ಪ ಸತ್ಯದ ಮೇಲೆ ಸವಾರಿ ಮಾಡುತ್ತಲೆ ಇರುತ್ತದೆ'.ಇದನ್ನು ಅಡಗಿಸಬೇಕಾದರೆ ಮೈಯೆಲ್ಲ ಕಣ್ಣಾಗಿರಬೇಕು.

ಆಗಾಗಬೇಕಾದರೆ ನಮ್ಮ ಲೇಖನಿ ಹರಿತಗೊಳ್ಳಬೇಕು.ಹೀಗಿದ್ದರಷ್ಟೆ ಸಮಾಜದ ಅಂಕುಡೊಂಕುಗಳ ಬಗ್ಗೆ ದನಿಯೆತ್ತಬಹುದು. ಇಂತಹ ಒಂದುಉತ್ತಮಕೆಲಸವನ್ನುಕವಯತ್ರಿಶಬ್ರಿನಾರವರುತಮ್ಮ ಬರೆಹಗಳ ಮೂಲಕ ದನಿ ಎತ್ತಿರುವುದು ಖುಷಿಯಾಗಿದೆ. ಬರೆಹ ಎನ್ನುವುದು ಎಲ್ಲರನ್ನು ಅಪ್ಪಿಕೊಳ್ಳುವುದಲ್ಲ. ಅಪ್ಪಿಕೊಂಡರಂತು ಹೂ ಅರಳಿದಂತೆ ,ಪಕಳೆಗಳು ನಲಿದು ವಾಲಿಕೈಬೀಸಿಸೆಳೆಯುವಂತೆಲೇಖನಿಯೊಳಗೆಮೈದಳೆದು ಬಿಡುತ್ತವೆ.ಇಂತಹ ಬರೆಹಗಳನ್ನು ನಾನು ಶ್ರೀಮತಿ ಶಬ್ರಿನಾ ಮಹಮದ್ ಅಲಿಯವರ 'ಬಿಳಿ ಹಾಳೆಯ ಮೇಲೆ ಕೆಂಪು ಶಾಹಿ' ಕವನ ಸಂಕಲನದೊಳಗಿನ ಕವನಗಳನ್ನ ಓದುವಾಗ ಗಮನಿಸಿದ್ದುನಿಜಕ್ಕೂಮನಸ್ಸಿಗೆತುಂಬಾಖುಷಿಯಾಯಿತು. ಏಕೆಂದರೆ ಅಲ್ಲಿನ ಬರೆಹಗಳನ್ನು ಓದುತ್ತಿದ್ದರೆ ಅವು ಮಲ್ಲಿಗೆ ಬಳ್ಳಿಯಂತೆ ಹಬ್ಬುತ್ತಿರುವ ಹಾಗೆ ಭಾಸವಾಗುತ್ತದೆ.

ಅಂದರೆ ಒಂದೊಂದು ಕವನಗಳನ್ನು ಓದುತ್ತಿದ್ದರೆ ಅರ್ಥಗರ್ಭಿತ ಹಾಗು ಸೊಗಸಾಗಿ ಮೂಡಿಬಂದಿದ್ದಲ್ಲದೆ; ಪದೇ ಪದೆ ಓದಬೇಕಿನಿಸಿದಂತು ಸತ್ಯ.ಇಲ್ಲಿ ಕವಯತ್ರಿ ಆರಿಸಿಕೊಂಡಿರುವ ಕವನಗಳ ವಿಷಯವಸ್ತುಗಳು ಒಂದಷ್ಟು ದಿನ ಬಿಟ್ಟು ಓದಿದರು ಕೂಡ ಮನಸ್ಸಿನಲ್ಲಿ ಮನೆಮಾಡುವಂತಿವೆ.

ಸಂಸ್ಕೃತ ಕವಿಯೊಬ್ಬನ ಪ್ರಕಾರ: ಕಾವ್ಯವಾಗಲಿ, ಬಾಣವಾಗಲಿ ಓದುಗನ ಹೃದಯವನ್ನು ಕಂಪಿಸುತ್ತ ನಾಟದಿದ್ದರೆ ಅದೆಂಥ ಬಾಣ, ಅದೆಂಥ ಕಾವ್ಯ? ಎಂದಿರುವುದು ನನಗಂತು ಹೌದೆನಿಸುತದೆ.ಅಂ-ದರೆ ಕವನಗಳು ಓದುಗನ ಮನಸೂರೆಗೊಂಡರಷ್ಟೆ ಬರೆಹಗಳಿಗೂ ಶೋಭೆ.ಬರೆದವರಿಗೂ ಶೋಭೆ. ಇಲ್ಲಿ ಕವಯತ್ರಿ ಶಬ್ರಿನಾರವರು ತಮ್ಮ ಬರೆಹಗಳಿಂದಲೆ ಶೋಭಿಸುತ್ತಿರುವುದು ತುಂಬಾ ಸಂತಸ ತಂದಿದೆ.

ಒಂದೊಂದು ಕವನಗಳು ಶೀರ್ಷಿಕೆಗೆ ತಕ್ಕಂತೆ ಅರ್ಥಪೂರ್ಣವಾಗಿ ರಾರಾಜಿಸುತ್ತ,

ಉದಧಿಯೊಳಗಿನ ಮುತ್ತು, ರತ್ನ ,ಹವಳದಂತೆ ಹೊಳೆಯುತ್ತ ಬೀಗುತ್ತಿವೆ.ಹಾಗೆಯೆ ಅವುಗಳಲ್ಲೆವನ್ನು ಗಮನಿಸುತ್ತಿದ್ದರಂತು ಅದ್ಬುತ ಪದಗಳ ಹೂರಣವೇ ಸರಿ.!ಎಂಬಂತೆ ಭಾಸವಾಗುತಿದೆ.ಕವಯತ್ರಿಯವರು ಈ ಕವನಸಂಕಲನದಲ್ಲಿ ಸುಮಾರು 40 ಕವನಗಳಿದ್ದು ಅವುಗಳೆಲ್ಲವು ;ವಿಶೇಷ, ವಿಭಿನ್ನ ,

ವಿಶಿಷ್ಟತೆಯನ್ನು ಕಾಯ್ದುಕೊಂಡಿರುವುದನ್ನು ನೋಡಬಹುದಾಗಿದೆ.ಹಾಗೆಯೆ ಇವರು ಲೇಖಕಿಯಾಗಿ ,ಬರಹಗಾರರಾಗಿ ನಿತ್ಯವೂ ಕನ್ನಡಮ್ಮನ ಸೇವೆಯನ್ನು ಮಾಡುತ್ತ ಕನ್ನಡ ಸಾಹಿತ್ಯ ಕೃಷಿಯನ್ನು ಹೆಚ್ಚುಚ್ಚು ಮಾಡುತ್ತಿರುವುದನ್ನು ಕಂಡರೆ ಮನಸ್ಸಿಗೊಂತರ ಖುಷಿಯಾಗುವುದು. ಬಹುಮುಖ ಪ್ರತಿಭೆಯಾಗಿರುವ ಕವಯತ್ರಿ ಶ್ರೀಮತಿ ಶಬ್ರಿನ ಮಹಮದ್ ಅಲಿ ಮೇಡಮ್ ರವರ ಸಾಹಿತ್ಯ ಸಂಗತ ನಿರಂತರವಾಗಿರಲಿ.

ಕವಯತ್ರಿಯವರಕವನಸಂಕಲನದಒಳಹೊಕ್ಕಾಗಅದ್ಭುತ ,ಅರ್ಥಪೂರ್ಣ ಹಾಗು ಸೊಗಸಾದ ವಿಷಯವಸ್ತುವುಳ್ಳ ಕವನಗಳು ರಾರಾಜಿಸುತಿದ್ದವು.

ಬದುಕೆಂದರೆ ಭರವಸೆ ಎನ್ನುವ ಶೀರ್ಷಿಕೆಯಲ್ಲಿ ತುಂಬ ಚನ್ನಾಗಿ ಹೇಳಿರುವರು.ಬದುಕು ಭಯವಲ್ಲ ಅದೊಂದು ಭರವಸೆಗಳ ಹುರುಪು ಎಂದಿರುವರು.


ಆಧುನಿಕತೆಯಪರಾಕಾಷ್ಟೆಗೆಸಿಲುಕಿಹಳತುಗಳನ್ನುಮರೆತು ಹೊಸತುಗಳಬೆನ್ನತ್ತಿರುವಜನರುಹಾಗುಅವಲ್ಲಾಗುತ್ತಿರುವ ಬದಲಾವಣೆಗಳಿಗೆಉತ್ತಮನಿದರ್ಶನಗಳನ್ನುನೀಡುವುದರ ವರ್ಣನೆ ಚನ್ನಾಗಿದೆ.

ಬುವಿಯ ಒಡಲನ್ನು ಬರಿದು ಮಾಡಿ ಬರಡಾಗಿಸುತ್ತಿರುವ ಮನಜನಿಗೊಂದುಮಸಣಭೇರಿಯೆಂಬಕವನದಮೂಲಕ ಚಂದದ ಸಂದೇಶ ನೀಡಿರುವರು.ಮೌನವೆಂಬುದು ಕತ್ತಿಗಿಂತಲು ಹರಿತವೆಂದು ಮಾರ್ಮಿಕ ಸತ್ಯ ಅರುಹಿಹರು. ಗುರುಗಳಮಹತ್ವಸಾರುವಅಭಿಮಾನದಅಭಿನುಡಿಗಳಂತು ಚಂದ. ಇವರ ಕವನಗಳಲ್ಲಿ ನೋವು ,ನಲಿವು, ಬೇಡಿಕೆ, ಪರಾಕಾಷ್ಟೆ,ಪ್ರೀತಿಯ ಬಂಧ,ಅಮ್ಮ ಮಗುವಿನ ಅವಿಚ್ಛಿನ್ನತೆ ಬಹಳ ಸೊಗಸಾಗಿ ಮೂಡಿಬಂದಿವೆ.

ಹಾಗೆಯೇ ನಾಡು, ನುಡಿ,ರಾಷ್ಟ್ರ ಭಕ್ತಿ ,

ರಾಷ್ಟ್ರಲಾಂಛನಕ್ಕೆ ಅಭಿಮಾನದ ಅಭಿನಂದನೆ .ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮುಗ್ಧಚೇತನ ಸ್ವಾತಂತ್ರ್ಯ ಹೋರಾಟಗಾರರು ಹಾಗು ವೀರ ಸೇನಾನಿಗಳ ಹೋರಾಟ, ಛಲ ,ಸಂಕಟಗಳು, ಹುಮ್ಮಸ್ಸು ಇತ್ಯಾದಿಗಳ ಸುಂದರ ವರ್ಣನೆ ಹಾಗೆಯೆ ನಿರಾಸೆ, ಅಸಮಧಾನ ,ಧಿಕ್ಕಾರದ ಕೂಗುಗಳಆರ್ಭಟಅಲ್ಲಲ್ಲಿಬಿಂಬಿಸಿವೆ.ಮುಂದುವರಿದಂತೆ ಸಾಮಾಜಿಕ ಅನಿಷ್ಟಗಳಿಗೂ ಎದೆಯಾಳದಿಂದ ಸ್ಪಂದಿಸುವ ಕವಯತ್ರಿಯವರ ಕಾರ್ಯ ಹೃದಯಸ್ಪರ್ಶಿಯಾಗಿದೆ.

ಈ ಕವನ ಸಂಕಲನದೊಳಗಿರುವ ಎಲ್ಲಾ ಕವನಗಳು ಒಂದಲ್ಲ ಒಂದು ರೀತಿಯಲ್ಲಿ ಸೊಗಸಾಗಿ ಮೂಡಿ ಬಂದಿವೆ




ಅದರೊಳಗೊಂದಷ್ಟು ಕವನಗಳ ಬಗ್ಗೆ ಹೇಳಬಯಸುವೆ...

ನೇಗಿಲ ಮರೆತವರು.....
ಗತ್ತಿನ ದನಿಯಲಿ ತಂದೆಯ ತೆಗಳುತ
ತುತ್ತನು ತಿನಿಸಿದ ಮಾತೆಯ ಮರೆಯುತ
ನೆತ್ತಿಯ ಮೇಲಿನ ಕತ್ತಿಯ ತಿಳಿಯದೆ ಬೀಗುತ ನಡೆವವರು
ಹೊತ್ತಿಗೆ ತಿರುಳನು ಗಾಳಿಗೆ ತೂರುತ
ಮತ್ತಿನ ಸೊಕ್ಕಲಿ ಕಾಲವ ಕಳೆಯುತ
ಬಿತ್ತದೆ ಬೆಳೆಯುವ ಹಾದಿಯ ಹುಡುಕುತ ನೇಗಿಲ ಮರೆತವರು...

ಅದೆಷ್ಟುಚಂದದಕವಿತೆ.ಆಧುನಿಕತೆಯಭರಾಟೆಯಿಂದಾಗಿ ಬದಲಾವಣೆ ಪರ್ವ ಎಲ್ಲೆಲ್ಲು ಹಾಗೆ ಎಲ್ಲದರಲ್ಲೂ ನೋಡ್ತಾ ಇದ್ದೇವೆ.ಅದಕ್ಕೆ ತಕ್ಕಂತೆ ನಮ್ಮ ಜನ ಮೋಜು ,ಮಸ್ತು ಅದರ ಜೊತೆಗೆ ಸೋಮಾರಿತನ ಬೇರೆ.ನಗರಗಳಿಗೆ ವಲಸೆ ಹೋಗುವ ಹಠಚಟದಿಂದಾಗಿ ಎಲ್ಲರೂ ಹಳ್ಳಿ ಬಿಟ್ಟು ಪಟ್ಟಣ ಸೇರ್ತಾ ಇದ್ದಾರೆ. ಹೀಗೆ ಆದ್ರೆ ಬೇಸಾಯ ಮಾಡೋರು ಯಾರು.? ಅಲ್ವಾ! ಈ ಒಂದು ನಿಟ್ಟಿನಲ್ಲಿ ಕವಯತ್ರಿಯವರನೇಗಿಲ ಮರೆತವರು ಪದ್ಯದ ಸಾಲುಗಳು ತುಂಬ ಅರ್ಥಪೂರ್ಣವಾಗಿವೆ.

ಇತ್ತೀಚೆಗಂತುತಾತ,ಮುತ್ತಾಂದಿರಕಾಲದಎಲ್ಲಾವಸ್ತುಗಳು ಮೂಲೆ ಸೇರುತ್ತಿವೆ.ಈಗೆಲ್ಲ ಎಲೆಕ್ಟ್ರಾನಿಕ್ ವಸ್ತುಗಳು, ಟ್ರ್ಯಾಕ್ಟರ್‌ಗಳುಬಂದಿವೆ.ವ್ಯವಸಾಯಮಾಡೋಕೆಹಿಂದಿನ ಕಾಲದ ನೇಗಿಲು, ಕುಂಟೆ, ನೊಗ ಮಾಯವೋ ಮಾಯ. ಅಪ್ಪ, ಅಮ್ಮ ಸಂಪಾದನೆ ಮಾಡಿರೊದನ್ನು ಉಳಿಸಿಕೊಳ್ಳದೆ ದುಂದುವೆಚ್ಚ ಮಾಡುತ್ತ ಜೀವನ ಮಾಡ್ತಿದಾರೆ.

ಜಮೀನು ಇದ್ರೂ ಕೂಡ ವ್ಯವಸಾಯ ಮಾಡದೆ ನಗರಗಳ ಕಡೆ ಮುಖ ಮಾಡಿ ನಿಂತಿದ್ದಾರೆ.

ಇಂತವರಿಗೆ ಅಪ್ಪ, ಅಮ್ಮನ ಬೆವರ ಹನಿಗಳ ಬೆಲೆ ಗೊತ್ತಿಲ್ಲ. ಅವರಿಗೆ ದಿಮಾಕಿನ ಮಾತುಗಳನ್ನಾಡಿ ಕಾಲ ಕಳೆಯೊರೆ ಹೆಚ್ಚಾಗಿದ್ದಾರೆ.ಹಿಂಗಾಗಿವ್ಯವಸಾಯದುಪಕರಣಗಳನ್ನೆಲ್ಲ ಮರೆತೆ ಹೋಗಿದ್ದಾರೆ ಎಂಬ ಈ ಸಾಲುಗಳು ನೇಗಿಲ ಮರೆತವರು ಪದ್ಯದಲ್ಲಿ ತುಂಬಾ ಚನ್ನಾಗಿ ಮೂಡಿ ಬಂದಿವೆ.

ನಾ ಕೇಳದ ಹುಟ್ಟಿಗೇಕೆ ಶಿಕ್ಷೆ..?.....
ನಾ ಕಣ್ಣು ಬಿಡುವ ಮೊದಲೇ
ಹೆತ್ತವರಿಂದ ತಿರಸ್ಕಾರವಂತೆ
ನಡೆದಾಡುವ ಮೊದಲೇ
ನಾ ಹೊರೆಯಾದನಂತೆ
ಮಾತನಾಡುವ ಮೊದಲೇ
ನಾ ಅಪ್ರಯೋಜಕಿಯಂತೆ
ಅಕ್ಷರ ಕಲಿಯುವ ಮೊದಲೇ
ನಾ ಅಬಲೆಯಂತೆ
ನಾ ಕೇಳದ ಹುಟ್ಟಿಗೆ
ನಮಗ್ಯಾಕೆ ಇಂಥ ಶಿಕ್ಷೆ.?

ಈ ಮೇಲಿನ ಸಾಲುಗಳು ನಿಜಕ್ಕೂ ಸತ್ಯ.ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗೂ ಬದುಕುವ ಹಕ್ಕಿದೆ ಪುರುಷರಂತೆ ಸಾಮರ್ಥ್ಯವುಳ್ಳವಳಾಗಿದ್ದರು.ಕೆಲವು ಮೂಢಾತ್ಮರಂತು ಹೆಣ್ಣು ಹೆಣ್ಣೆಂದು ಜರಿಯುತ್ತಿದ್ದಾರೆ.

ಗರ್ಭಾವಸ್ಥೆಯಲ್ಲಿರುವಾಗಲೆಕೆಲವೊಂದಷ್ಟುಹೆಣ್ಣುಮಕ್ಕಳು ತಿರಸ್ಕಾರಕೆ ಒಳಗಾಗುತ್ತಿರುವುದನ್ನ ಗಮನಿಸುತ್ತಿದ್ದೇವೆ. ಹೆಣ್ಣು ಮಕ್ಕಳನ್ನು ತಿರಸ್ಕರಿಸುವವರು ನಿಜ ಅವಿವೇಕಿಗಳು. ಹೆಣ್ಣು ಯಾವ ಗಂಡಿಗೂ ಕಮ್ಮಿಯಿಲ್ಲ. ಯಾವ ಕಾರ್ಯಸಾಧನೆಯಲ್ಲು ಮುಂದಿರುವರು. ಅಂಥದರಲ್ಲಿ ಹೆಣ್ಣನ್ನು ತೆಗಳುವವರಿಗೇನು ಕಡಿಮೆಯಿಲ್ಲ."ಜಗದ ಸೊಬಗು ಹೆಣ್ಣು ,ಮನೆಯ ಬೆಡುಗು ,ಬೆರಗು ಹೆಣ್ಣು, ತಿಳಿದಿರಲಿ ಜಗಕ್ಕೆ ಕಣ್ಣು ಕೂಡ ಹೆಣ್ಣೆ"..! ಈ ಸತ್ಯವನ್ನೇಕೆ ಅರಿಯರೋ ಆ ದೇವರೆ ಬಲ್ಲ.!ಪುರುಷನಂತೆ ಹೆಣ್ಣು ಕೂಡ ಗಟ್ಟಿಗಿತ್ತಿ, ಛಲವಾದಿ, ಧೈರ್ಯವಂತಳು ,ಬಲಶಾಲಿ, ಜ್ಞಾನಿ,ವಿಮಾನವನ್ನು ಚಲಿಸಬಲ್ಲಳು ಚಂದ್ರಲೋಕಕೆ ಹೋಗ ಬಲ್ಲಳು ಪರ್ವತವನ್ನು ಹತ್ತ ಬಲ್ಲಳು, ಐಎಎಸ್ ,ಐಪಿಎಸ್, ಆಗಿರುವಳು. ಮುಳುಗಲೂ ಬಲ್ಲಳು, ತೇಲಳು ಬಲ್ಲಳು, ಹಾರಲು ಬಲ್ಲಳು.

ಹೀಗಿರುವಾಗ ಆಕೆಯನ್ನೇಕೆ ತಿರಸ್ಕರಿಸುವಿರಿ..? ಹೀಗೆ ಹೆಣ್ಣಿನಅಳಲನ್ನುಸೂಕ್ಷ್ಮವಾಗಿತೆರೆದಿಟ್ಟಿರುವರೀತಿತುಂಬಾ ಚನ್ನಾಗಿದೆ.

ಪದಗಳಲ್ಲಿ ಹಿಡಿದಿಡಲಾರೆ......
ನೊಂದ ಅಸ್ಪೃಶ್ಯರ ಗತ್ತಿನ ದನಿಯಾಗಿ
ಸ್ತ್ರೀ ಶಿಕ್ಷಣಕ್ಕೆ ಒತ್ತು ನೀಡಿದ
ಮಹನೀಯರು
ಸಮಾನತೆಗಾಗಿ ಪಣತೊಟ್ಟ
ಧೀರ ಬಾಬಾಸಾಹೇಬರು
ಭಾರತಾಂಬೆಯ ಹೆಮ್ಮೆಯ ಪುತ್ರರು

ಅಂಬೇಡ್ಕರ್ ರವರ ಸಾಧನೆಗಳು ಅವರ ಹೋರಾಟಗಳು ಕುರಿತಂತೆಅವರಬಗೆಗಿನಈಮೇಲಿನಸಾಲುಗಳುತುಂಬಾ ಚನ್ನಾಗಿಮೂಡಿಬಂದಿವೆ.ಸ್ತ್ರೀ ಶಿಕ್ಷಣಕ್ಕೆಒತ್ತುನೀಡಿದಅವರ ನಿಲುವು ಸಮಾನತೆಗಾಗಿ ಹೋರಾಡಿದ ಅವರ ದಿಟ್ಟತನ. ಹಾಗು ಅಸ್ಪೃಶ್ಯತೆಯನ್ನು ತೊಲಗಿಸಲು ಅವರು ಪಟ್ಟಶ್ರಮ ಅದ್ವಿತೀಯ, ಅಮೋಘ.

ಅಂಬೇಡ್ಕರ್ ರವರು ಜಾತಿ ಮತ್ತು ಅಸ್ಪೃಶ್ಯತೆ ಆಚರಣೆಯ ವಿರುದ್ಧದ ಹೋರಾಟಕ್ಕೆ ಹೆಸರುವಾಸಿಯಾಗಿದ್ದರೂ ಅವರ ಆಲೋಚನೆಗಳು ರಾಷ್ಟ್ರೀಯತೆಯ ಬಗ್ಗೆಯೆ ಹೆಚ್ಚಾಗಿರುವುದನ್ನು ಗಮನಿಸಬಹುದಾಗಿದೆ.ಸಮಾನತೆಗಾಗಿ ಶ್ರಮಿಸಿದ ಅಂಬೇಡ್ಕರ್ ರವರು ಜಾತಿ, ಧರ್ಮ, ಅಥವಾ ಲಿಂಗವನ್ನು ಲೆಕ್ಕಿಸದೆ ಸಮಾನತೆಗಾಗಿ ಹೋರಾಟ ಮಾಡಿದ ಬಾಬಾಸಾಹೇಬರು ನಿಜಕ್ಕೂ ಭಾರತಾಂಬೆಯ ಪುತ್ರರೆ ಆಗಿದ್ದರು.

ತ್ರಿವರ್ಣ ಧ್ವಜ....
ಕೇಸರಿ ಬಿಳಿ ಹಸಿರು
ನಮ್ಮ ಧ್ವಜದ ಉಸಿರು
ಸಾಟಿಯಿಲ್ಲದ ಆಕರ್ಷಕ ಹೊಳಪು
ಪಿಂಗಳ ವೆಂಕಯ್ಯರಿಂದ ಪಡೆದ ರೂಪು..

ನಮ್ಮ ರಾಷ್ಟ್ರಧ್ವಜದ ಹೆಮ್ಮೆಯ ಮಾತುಗಳನ್ನಾಡಿರುವ ಕವಯತ್ರಿಯವರು ಕೇಸರಿ ಬಿಳಿ ಹಸಿರು ಬಣ್ಣಗಳು ಧ್ವಜದ ಉಸಿರಾಗಿವೆ ಎಂದು ಉಸುರಿಸಿರುವರು.ಆ ತ್ರಿವರ್ಣಗಳಲ್ಲಿ ಕೇಸರಿ ಧೈರ್ಯ, ನಿಸ್ವಾರ್ಥತೆ ಮತ್ತು ಶಕ್ತಿಯ ಸಂಕೇತ.ಬಿಳಿ ಸತ್ಯ, ಶಾಂತಿ ಮತ್ತು ಶುದ್ಧತೆಯ ಸಂಕೇತ.ಹಸಿರು ಅಶ್ವದಳ, ಬೆಳವಣಿಗೆಮತ್ತುಫಲವತ್ತತೆಯಸಂಕೇತವಾಗಿದೆ.ಜೊತೆಗೆ ಸಮೃದ್ಧಿಯನ್ನುಬಿಂಬಿಸುವಸಾಲುಗಳಿವೆ.ಹಾಗೆಯೆಭಾರತದ ರಾಷ್ಟ್ರೀಯಧ್ವಜಅಥವಾತ್ರಿವರ್ಣಧ್ವಜವುನಮ್ಮರಾಷ್ಟ್ರೀಯ ಹೆಮ್ಮೆಯ ಸಂಕೇತವಾಗಿದೆ. ತ್ರಿವರ್ಣ ಧ್ವಜವು ಭಾರತದ ಜನರ ಭರವಸೆ ಮತ್ತು ಆಕಾಂಕ್ಷೆಗಳನ್ನು ಪ್ರತಿನಿಧಿಸುತ್ತದೆ ಎಂಬುದನ್ನು ಸಹ ತಿಳಿಯಬಹುದಾಗಿದೆ.ಸಾಟಿಯಿಲ್ಲದ ತಿರಂಗ ಪಿಂಗಳ ವೆಂಕಯ್ಯರವರಿಂದ ಉತ್ತಮವಾದ ರೂಪು ಪಡೆದ ಬಗೆಯನ್ನು ಚನ್ನಾಗಿ ವಿವರಿಸಿರುವರು.

ಹೀಗೆ ಕವಯತ್ರಿಯವರ ಕವನಗಳು ಒಂದೊಂದು ವಿಭಿನ್ನವಾಗಿದ್ದು ಅರ್ಥಪೂರ್ಣವಾಗಿ ಮೂಡಿಬಂದಿರುವುದನ್ನು ಕಾಣಬಹುದಾಗಿದೆ.

ದೇಶಪ್ರೇಮ, ದೇಶಭಕ್ತಿಯ ಬಗ್ಗೆಗಿನ ಸಾಲುಗಳ ಮೈನವಿರೇಳುವಂತ ಅನುಭವವಾಗುವುದಂತು ಸತ್ಯ.

ರಾಜಕೀಯ ಮುತ್ಸದ್ಧಿ ,ಸ್ವತಂತ್ರ್ಯ ಹೋರಾಟಗಾರರು, ಸಮಾಜ ಸುಧಾರಕರ ಬಗ್ಗೆ ಬರೆದಿರುವ ಇವರ ಸಾಲುಗಳು ಮನದಾಳದಲ್ಲಿ ನೆಲೆನಿಂತಂತಿವೆ.ಅಮ್ಮ ಮಗುವಿನ ಪ್ರೀತಿ, ವಾತ್ಸಲ್ಯ ,ಕರುಣಾಭರಿತ ಸಾಲುಗಳು ಹಾಗೆಯೆ ಸೈನಿಕರ ಸಾಧನೆಪ್ರಸ್ತುತಸಮಾಜದಲ್ಲಿನಡೆಯುತ್ತಿರುವಸಂಗತಿಗಳು ಘಟನೆಗಳನ್ನಾಧರಿಸಿದ ಕವನಗಳು ತುಂಬಾ ಚನ್ನಾಗಿ ಮೂಡಿಬಂದಿವೆ.ವೇದನೆ ನಿವೇದನೆಯ ಬಗ್ಗೆ ಬಿಂಬ ಪ್ರತಿಬಿಂಬದ ಕಲ್ಪನೆ ಅತ್ಯಾಕರ್ಷಣೆಯಾಗಿದೆ.

ಹೀಗೆಯೆ ನಿಮ್ಮ ಸಾಹಿತ್ಯ ಕೃಷಿ ನಿರಂತರ ಮುಂದುವರಿಯುತ್ತಿರಲಿ ಮೇಡಮ್.ನಿಮ್ಮ ಸೃಜನಶೀಲ ಗುಣ, ಕ್ರಿಯಾಶೀಲತೆ ನಿಜಕ್ಕೂ ಮೆಚ್ಚತಕ್ಕದ್ದು.ಕನ್ನಡದ ಬಗೆಗಿನ ನಿಮ್ಮ ಆಸ್ಥೆ ಹಾಗು ಆಸಕ್ತಿಗೆ ಹೆಮ್ಮೆ ಎನಿಸುತಿದೆ. ತಮ್ಮ ಅನುಭವಗಳ ರಾಶಿಯನ್ನ ಬರೆಹರೂಪದಲ್ಲಿ ತಂದಿರುವುದು ನಿಜಕ್ಕೂ ಖುಷಿಯೆನಿಸುತಿದೆ.ಅಕ್ಷರ ರೂಪದ ಮೂಲಕ ಸೃಜನಶೀಲ ಕವಿತೆಗಳನ್ನು ರಚಿಸಿರುವ ನಿಮ್ಮ ಚಾಕ್ಯತೆ ತುಂಬಾ ಚನ್ನಾಗಿದೆ. ಹಾಗೆಯೇ ನಿಮ್ಮೀ ಕವನಸಂಕಲನದೊಳಗೆ ಷಟ್ಪದಿಯ ಕವನಗಳನ್ನು ಓದಿ ಮನಸ್ಸಿಗೆ ಸಾನಂದವಾಯಿತು.

ಅವೆಲ್ಲವೂ ಅರ್ಥಪೂರ್ಣ ಹಾಗು ಉತ್ತಮ ವಸ್ತುವಿಷಯ ಕೂಡ ಅತ್ಯುತ್ತಮವಾಗಿವೆ.ನಿಮ್ಮ ಮುಂದಿನ ಕವನಗಳು ಮತ್ತಷ್ಟು ಸುಂದರವಾಗಿ ಮೂಡಿಬರಲೆಂದು ಆಶಿಸುವೆ. ಈ ಮುಖೇನ ಮುಂದೆಯೂ ಕೂಡ ನಾಡಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕಕ್ಕೆ ತಮ್ಮದೆ ಆದ ಮಗದಷ್ಟು ವಿಶೇಷ ಸಂಕಲನಗಳ ಕೊಡುಗೆಯಾಗಲಿ.

ಜಗನ್ಮಾತೆಯ ಕೃಪಾಕಟಾಕ್ಷನಿಮ್ಮ ಮೇಲೆ ಸದಾ ಇರಲೆಂದು ಹಾರೈಸುತ್ತ.

**ಧನ್ಯವಾದಗಳೊಂದಿಗೆ....**

* * *

**ಅಭಿಜ್ಞಾ.ಪಿ.ಎಮ್.ಗೌಡ**
**ಶಿಕ್ಷಕಿ ಮತ್ತು ಬರಹಗಾರ್ತಿ..?**
**ಮಂಡ್ಯ..**

# ರೈತರು ಅಧಿಕ ಇಳುವರಿಯ ಕಬ್ಬು ಪೂರೈಸಿ ಕಾರ್ಖಾನೆಯ ಪ್ರಗತಿಗೆ ಸಹಕರಿಸಿ: ಅಧ್ಯಕ್ಷ ಪರಪ್ಪ ಸವದಿ

**ಅಥಣಿ :** ಖಾಸಗಿ ಸಕ್ಕರೆ ಕಾರ್ಖಾನೆಗಳ ಸಾಕಷ್ಟು ಪೈಪೋಟಿಯ ನಡುವೆಯೂ 2023-24 ನೇ ಸಾಲಿನ ಹಂಗಾಮಿನಲ್ಲಿ ಪೂರೈಕೆಯಾದ ಪ್ರತಿ ಟನ್ ಕಬ್ಬಿಗೆ ನಮ್ಮ ಕಾರಖಾನೆಯಿಂದ ಕೇಂದ್ರ ಸರಕಾರ ನಿಗದಿ ಪಡಿಸಿದ ಎಫ್.ಆರ್.ಪಿ ದರಕ್ಕಿಂತ ಹೆಚ್ಚಿನ ಬಿಲ್ಲನ್ನು ನಿಗದಿತ ಅವಧಿಯಲ್ಲಿಯೇ ರೈತರಿಗೆ ಪಾವತಿಸಲಾಗಿದೆ ಎಂದು ಕಾರಖಾನೆ ಅಧ್ಯಕ್ಷ ಪರಪ್ಪ ಸವದಿ ಹೇಳಿದರು.

ಅವರು ಗುರುವಾರ ಕೃಷ್ಣಾ ಸಹಕಾರಿ ಸಕ್ಕರೆ ಕಾರಖಾನೆಯ 32 ನೇ ವಾರ್ಷಿಕ ಸರ್ವ ಸಾಧಾರಣ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ನಮ್ಮ ಕಾರಖಾನೆಯ ಆಡಳಿತ ಮಂಡಳಿಯು ತನ್ನದೇ ಆದ ಮುಂದಾಲೋಚನೆಯನ್ನು ರೂಪಿಸಿಕೊಂಡು ಪ್ರಗತಿ ಪಥದತ್ತ ಕೊಂಡೊಯ್ಯುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಪ್ರತಿ ವರ್ಷದಂತೆ ಶೇರು ಸದಸ್ಯರಿಗೆ ಪ್ರತಿ ಶೇರಿಗೆ 50 ಕೆ.ಜಿ ಹಾಗೂ ಕಬ್ಬು ಪೂರೈಕೆದಾರರಿಗೆ ಪ್ರತಿ ಟನ್ ಕಬ್ಬಿಗೆ 500 ಗ್ರಾಮನಂತೆ ಮತ್ತು ಕಾರಖಾನೆಯ ಸಿಬ್ಬಂದಿ ಕಾರ್ಮಿಕರಿಗೆ 25 ಕೆ.ಜಿಯಂತೆ ಪ್ರತಿ ಕಿಲೋಗೆ ರಿಯಾಯತಿ ದರ 20 ರೂ.ಗಳಂತೆ ವಿತರಿಸಲಾಗುವುದು ಎಂದ ಅವರು ನಮ್ಮ ಕಾರಖಾನೆಗೆ 2023-24




ಸಾಲಿನಲ್ಲಿ 65, 86, 666 ರೂ.ಗಳಷ್ಟು ನಿವ್ವಳ ಲಾಭವಾಗಿದ್ದು, ಮುಂಬರುವ ಹಂಗಾಮಿನಲ್ಲಿ ಉತ್ತಮ ಇಳುವರಿಯುಳ್ಳ ಕಬ್ಬನ್ನು ಪೂರೈಕೆ ಮಾಡಬೇಕು ಎಂದು ಮನವಿ ಮಾಡಿದರು.

ಕಳೆದ ಹಂಗಾಮಿನಲ್ಲಿ 5,60,917 ಟನ್ ಕಬ್ಬು ನುರಿಸಿ 10.96 ಇಳುವರಿ ಮೂಲಕ 608000 ಕ್ವಿಂಟಾಲ್ ಸಕ್ಕರೆ ಉತ್ಪಾದಿಸಲಾಗಿದೆ ಜೊತೆಗೆ 3 ಕೋಟಿ 63 ಲಕ್ಷ 34 ಸಾವಿರ ಯೂನಿಟ್ ವಿದ್ಯುತ್ ಉತ್ಪಾದಿಸಲಾಗಿದೆ ಎಂದು ಹೇಳಿದರು.

ಈ ವೇಳೆ ಕಾರಖಾನೆಯ ವ್ಯವಸ್ಥಾಪಕ ನಿರ್ದೇಶಕ ಜಿ.ಎಮ್.ಪಾಟೀಲ ಮಾತನಾಡಿ, ಕೃಷ್ಣಾ ಸಹಕಾರಿ ಸಕ್ಕ-ರೆ ಕಾರಖಾನೆ ನಿರ್ಧರಿಸುವ ಕಬ್ಬಿನ ದರದ ಆಧಾರದಲಿಯೇ ಬೆಳಗಾವಿ, ಬಾಗಲಕೋಟ ಮತ್ತು ವಿಜಯಪುರ ಜಿಲ್ಲೆಗಳ ಸಕ್ಕರೆ ಕಾರಖಾನೆಗಳ ದರ ನಿರ್ಧಾರ ಆಗುತ್ತದೆ ಹೀಗಾಗಿ ಕೃಷ್ಣಾ ಸಹಕಾರಿ ಸಕ್ಕರೆ ಕಾರಖಾನೆ ಮೂರು ಜಿಲ್ಲೆಗಳ ಕಾರಖಾನೆಯಾಗಿದೆ ಎಂದರು.

ಸಕ್ಕರೆ ದರದಲ್ಲಿ ಕುಸಿತವಾಗಿದ್ದರೂ ಕೂಡ ನಮ್ಮ ಕಾರಖಾನೆ ರೈತರಿಗೆ ಉತ್ತಮ ದರ ನೀಡಿದ್ದು, ಪ್ರಸಕ್ತ ಹಂಗಾಮಿನಲ್ಲಿಯೂ ಸಹ ಇತರ ಎಲ್ಲ ಖಾಸಗಿ ಕಾರಖಾನೆಗಳಿಗಿಂತ ರೈತರಿಗೆ ಹೆಚ್ಚು ದರ ನೀಡುತ್ತೇವೆ ಎಂದು ಹೇಳಿದರು.

ಸಭೆಯಲ್ಲಿ ರೈತ ಸದಸ್ಯರು, ರೈತ ಸಂಘದ ಪದಾಧಿಕಾರಿಗಳು ಕೇಳಿದ ಲಿಖಿತ ಪ್ರಶ್ನೆಗಳಿಗೆ ಕಾರಖಾನೆ ಅಧ್ಯಕ್ಷ ಪರಪ್ಪ ಸವದಿ, ವ್ಯವಸ್ಥಾಪಕ ನಿರ್ದೇಶಕ ಜಿ.ಎಮ್.ಪಾಟೀಲ ಉತ್ತರಿಸಿದರು. ಸಭೆ ನಡುವಳಿಕೆಯನ್ನು ಕಛೇರಿ ಅಧಿಕ್ಷಕ ಸುರೇಶ ಠಕ್ಕಣ್ಣವರ ಓದಿದರು, ಮುಖ್ಯ ಲೆಕ್ಕಾಧಿಕಾರಿ ಎ.ಸಿ. ರಾಚಪ್ಪನವರ 2024-25 ನೇ ಸಾಲಿನ ಅಂದಾಜು ಪತ್ರಿಕೆ ಓದಿ ಅನುಮೋದನೆ ಪಡೆದುಕೊಂಡರು.

ಈ ಸಭೆಯಲ್ಲಿ ಆಡಳಿತ ಮಂಡಳಿ ಉಪಾಧ್ಯಕ್ಷ ಶಂಕರ ವಾಘಮೋಡೆ, ನಿರ್ದೇಶಕ ಮಂಡಳಿ ಸದಸ್ಯರಾದ ಗುರುಬಸು ತೆವರಮನಿ, ಶಾಂತಿನಾಥ ನಂದೇಶ್ವರ, ಘೂಳಪ್ಪ ಜತ್ತಿ, ಶ್ರೀಮತಿ ಆರ್ ವ್ಹಿ ಕುಲಕರ್ಣಿ, ಶ್ರೀಮತಿ ಎಸ್ ಎಸ್ ನಾಯಿಕ, ರಮೇಶ ಪಟ್ಟಣ, ಸೌರಭ ಪಾಟೀಲ, ಸಿದ್ರಾಯ ನಾಯಿಕ, ಮಲ್ಲಿಕಾರ್ಜುನ ಗೋಟಖಿಂಡಿ, ಹಣಮಂತ ಜಗದೇವ, ವಿಶ್ವನಾಥ ಪಾಟೀಲ, ಪಿ.ಸಿ.ಪಾಟೀಲ. ಸೇರಿದಂತೆ ಕಾರಖಾನೆಯ ವಿಭಾಗಾಧಿಕಾರಿಗಳು, ರೈತ ಸದಸ್ಯರು, ಸಿಬ್ಬಂದಿ ಉಪಸ್ಥಿತರಿದ್ದರು.

**ಕೃಷ್ಣಾ ಸಹಕಾರಿ ಸಕ್ಕರೆ ಕಾರಖಾನೆ ಇತ್ತೀಚಿನ ವರ್ಷಗಳ ಅವಧಿಯಲ್ಲಿ ಅಥಣಿ ತಾಲೂಕಿನ 5 ಸಕ್ಕರೆ ಕಾರ್ಖಾನೆಗಳು ನೀಡಿದ ದರಕ್ಕಿಂತ ಪ್ರತಿ ಟನ್ ಕಬ್ಬಿಗೆ ಅತೀ ಹೆಚ್ಚಿನ ದರ ನೀಡಲಾಗಿದೆ. ರೈತ ಹಿತ ಕಾಯುವ ಕೃಷ್ಣಾ ಸಹಕಾರಿ ಸಕ್ಕರೆ ಕಾರಖಾನೆಗೆ ಅಥಣಿ ತಾಲೂಕಿನ ರೈತರು ಉತ್ತಮ ಗುಣ ಮಟ್ಟದ ಕಬ್ಬನ್ನು ಪೂರೈಸುವ ಮೂಲಕ ಕಾರಖಾನೆಯ ಅಭಿವೃದ್ಧಿ ಹಾಗೂ ಬೆಳವಣಿಗೆಗೆ ಸಹಕರಿಸಬೇಕು**

**। ಪರಪ್ಪ ಸವದಿ. ಅಧ್ಯಕ್ಷರು**
**ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ. ನಿ.**

# ವಾರ್ಷಿಕೋತ್ಸವಕ್ಕೆ ನಗರ ಸಭಾಧ್ಯಕ್ಷ ಪಟೇಲ್‌ರಿಂದ ಚಾಲನೆ



**ಕೊಪ್ಪಳ :** ನಗರದ ಕೇಂದ್ರ ಭಾಗ ಶ್ರೀ ಬಸವೇಶ್ವರ ಸರ್ಕಲ್ ಬಳಿ ಇರುವ ರೈಮಂಡ್ ಶೋರೂಮ್ 6ನೇ ವರ್ಷ ಪೂಡಿರ್ಣಗೊಳಿಸಿ ಏಳನೇ ವರ್ಷದಲ್ಲಿ ಪಾದಾರ್ಪಣೆ ಗೊಂಡಿರುವ ವಾರ್ಷಿಕೋತ್ಸವ ಸಮಾರಂಭದ ಉದ್ಘಾಟನೆಯನ್ನು ಕೇಕ್ ಕಟ್ ಮಾಡುವುದರ ಮೂಲಕ ಕೊಪ್ಪಳ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್ ನೆರವೇರಿಸಿದರು

ನಂತರ ರೈಮಡ್ ಶೋರೂಮ್ ಪರವಾಗಿ ಅಮ್ಜದ್ ಪಟೇಲ್ ರವರಿಗೆ ಸನ್ಮಾನ ಮಾಡಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ಕೊಪ್ಪಳದ ಜನ ಹೊಸಪೇಟೆ, ಹುಬ್ಬಳ್ಳಿಗೆ ಬಟ್ಟೆ ತರಲು ಈ ಹಿಂದೆ ಹೋಗುತ್ತಿದ್ದರು ಈಗ ಕೊಪ್ಪಳದಲ್ಲಿಯೇ ಉತ್ತಮ ಗುಣಮಟ್ಟದ ಬಟ್ಟೆ ಕೊಪ್ಪಳದ ರೇಮಂಡ್ ಶೋರೂಮ್ ನಲ್ಲಿ ಸಿಗುತ್ತಿದೆ ಇದು ಒಳ್ಳೆಯ ಬೆಳವಣಿಗೆ ಕೊಪ್ಪಳದ ಜನತೆಗೆ ಅನುಕೂಲ ವಾಗಿದೆ ಇದರ ಮಾಲಕರಾದ ಡಾ, ಸ್ವಾಲೆಹಾ ಧರ್ಮಾಯತ್ ರವರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಾಹಕ ವ್ಯವಸ್ಥಾಪಕ ಮುಸ್ತಫಾ ಹುಸೇನ್ ರವರ ಕಾರ್ಯನಿರ್ವಹಣೆಯಲ್ಲಿ ಉತ್ತಮ ರೀತಿಯಲ್ಲಿ ಸಾಗಿರುವ ಕೊಪ್ಪಳದ ಈ ರೈಮಂಡ್ ಶೋರೂಮ್ ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಳೆಯಲಿ ಅಭಿವೃದ್ಧಿ ಹೊಂದಲಿ ಎಂದು ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ರವರು ಶುಭ ಹಾರೈಸಿದರು

ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಎಂ ಸಾಧಿಕ್ ಅಲಿ ವೆಲ್ಫೇರ್ ಪಾರ್ಟಿಯ ಕೊಪ್ಪಳ ಜಿಲ್ಲೆಯ ನಾಯಕ ಆದಿಲ್ ಪಟೇಲ್, ಉದ್ಯಮಿ ಜಾಕಿರ್ ಹುಸೇನ್ ಖಾನ್ ಕುಷ್ಟಗಿ, ಎಂಡಿ ಜಹೀರ್ ಅಲಿ ,ಎಂ ವಿಚಾರತ್ ಅಲಿ ,ಅಬೂಬಕರ್ ಅತ್ತಾರ್ , ಅಕ್ಬರ್ ಪೊಲೀಸ್ ಮನಿ, ಕೆ ಎಮ್ ಡಿ ,ಇಸ್ಮಾಯಿಲ್ ಜಬಿ ,ಜುಬೇರ್ ಪಾಷಾ ಅಶ್ಫಾಕ್ ಅಹಮದ್, ಸೇರಿದಂತೆ ರೈಮಂಡ್ ಶೋರೂಮ್ ಸಿಬ್ಬಂದಿಗಳಾದ ರೈಮಂಡ್ ಮಾಸ್ಟರ್ ಹೈದರ್ ಅಲಿ ವ್ಯವಸ್ಥಾಪಕಿ ಶಿಲ್ಪಾ ಗುಡ್ಡನಗೌಡರ್, ಮತ್ತು ಅಲ್ಲಾಭಕ್ಷಿ, ಎಜಾಜ್ ಹಾಗೂ ಸಂಜೀವ್ ಕುಮಾರ್ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಮಾರ್ಕಬ್ಬಿನಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸಮಗ್ರ ಪ್ರಶಸ್ತಿ

**ದೇವರಹಿಪ್ಪರಗಿ :** ಬಸವನ ಬಾಗೇವಾಡಿ ತಾಲ್ಲೂಕಿನ ಇಂಗಳೇಶ್ವರ ಗ್ರಾಮದಲ್ಲಿ ಗುರುವಾರ ನಡೆದ 2024-25 ನೇ ಸಾಲಿನ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಮಾರ್ಕಬ್ಬಿನಹಳ್ಳಿ ಗ್ರಾಮದ ಸರಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳು ಸಮಗ್ರ ಪ್ರಶಸ್ತಿ ಪಡೆದುಕೊಂಡಿದೆ.

ಬಾಲಕರ ಗುಂಪು ವಿಭಾಗದಲ್ಲಿ ವಾಲಿಬಾಲ್ ಪ್ರಥಮ, ಕಬ್ಬಡಿ ದ್ವಿತೀಯ,4?ಠ100 ರಿಲೇ ಪ್ರಥಮ, ಬಾಲಕಿಯರ ಗುಂಪು ವಿಭಾಗದಲ್ಲಿ ವಾಲಿಬಾಲ್ ದ್ವಿತೀಯ,ಖೋಖೊ ದ್ವಿತೀಯ.

ವೈಯಕ್ತಿಕ ವಿಭಾಗದಲ್ಲಿ ದರ್ಶನ ಐಹೊಳೆ ಗುಂಡು ಎಸೆತ ಮತ್ತು ಚಕ್ರ ಎಸೆತ ಪ್ರಥಮ,ಸ್ನೇಹ ಬಡಿಗೇರ ಚಕ್ರ ಎಸೆತ ಮತ್ತು ಉದ್ದ ಜಿಗಿತ ಪ್ರಥಮ ಗುಂಡು ಎಸೆತ ದ್ವಿತೀಯ,ಅಲಿಯಾ



ಮನಿಯಾರ್,600 ಮೀಟರ್ ಓಟ ದ್ವಿತೀಯ, ಆಸಿಫ್ ಗಣಿಯಾರ 600 ಮೀಟರ್ ಓಟ ದ್ವಿತೀಯ,ಸಂಗಮೇಶ ಬಾಬಾನಗರ ಚಕ್ರ ಎಸೆತ, ಉದ್ದು ಜಿಗಿತ ದ್ವಿತೀಯ,ರೇವಣಸಿದ್ಧಯ್ಯ ಹಿರೇಮಠ 400 ಮೀಟರ್ ಓಟ ದ್ವಿತೀಯ, ಪಡೆದಿರುತ್ತಾರೆ. ಕ್ರೀಡೆಯಲ್ಲಿ ಭಾಗವಿಸುವ ಮಕ್ಕಳು ಮಾನಸಿಕ ಮತ್ತು ದೈಹಿಕವಾಗಿ ಸಧೃಢವಾಗಲು ಸಹಾಯವಾಗಿದೆ.ವಿದ್ಯಾಬ್ಯಾಸದ ಜೊತೆ ಕ್ರೀಡೆಯಲ್ಲಿ ಪಾಲಗೊಂಡ ಮಕ್ಕಳು ಸಾಧನೆ ಮಾಡಿದ್ದೆಯಾದಲ್ಲಿ ಉತ್ತಮವಾದ ಭವಿಷ್ಯವಿದೆ ಕ್ರೀಡಾಪಟುಗಳಿಗೆ ನಮ್ಮ ದೇಶದಲ್ಲಿ ಉತ್ತಮ ಗೌರವವಿದೆ.ಎಂದು ಪ್ರಭಾರಿ ಮುಖ್ಯ ಶಿಕ್ಷಕ ಎಚ್ ಎಸ್. ತಳವಾರ ತಿಳಿಸಿದರು.

ಕ್ರೀಡೆಯಲ್ಲಿ ಮಕ್ಕಳು ಉತ್ತಮವಾಗಿ ಆಟ ಆಡಿ ವಿಜೇತರಾಗಿ ಶಾಲೆಗೆ ಸಮಗ್ರ ಪ್ರಶಸ್ತಿ ತಂದು ಶಾಲೆಯ ಕೀರ್ತಿ ಹೆಚ್ಚಿಸಿದ ವಿದ್ಯಾರ್ಥಿಗಳು ಇದೆ ರೀತಿ ರಾಜ್ಯ, ಮತ್ತು ರಾಷ್ಟ್ರಮಟದಲ್ಲಿಯೂ ಸಾಧನೆಯನ್ನು ಮಾಡಲಿ ಎಂದು ಶಾಲಾ ಶಿಕ್ಷಕರು ಗ್ರಾಮಸ್ಥರು ಹರ್ಷ ವ್ಯಕ್ತ ಪಡಿಸಿದ್ದಾರೆ.

# ಮಹಾದೇವಯ್ಯಾ ವಸ್ತ್ರದ ನಿಧನ

**ಮುಧೋಳ :** ಇಲ್ಲಿಯ ಮಂಟೂರ ರಸ್ತೆಯ ಪಕ್ಕದ ನಂದಿಶ್ವರ ಕಲ್ಯಾಣ ಮಂಟಪದ ಮಾಲೀಕರಾದ ಮಹಾದೇವಯ್ಯ ವಸ್ತ್ರದ ಅವರು ಸಪ್ಟೆಂಬರ್ 24 ರಂದು ನಿಧನರಾಗಿದ್ದಾರೆ.



ಅನ್ನದಾಸೋಹಿಯಾಗಿದ್ದ ಅವರು ಹಣ ಗಳಿಕೆಗಾಗಿ ಎಂದೂ ಹಪಾಪಿಸಿದವರಲ್ಲ. ಬಡವರು ಯಾರಾದರೂ ಬಂದು ನಮಗೆ ಮದುವೆಗೆ, ಅಯ್ಯಾಚಾರಕ್ಕೆ ಹಣದ ಅನುಕೂಲವಿಲ್ಲ ಎಂದು ಕೇಳಿಕೊಂಡರೆ, ಸಂಪೂರ್ಣ ಸಹಾಯ ಮಾಡುವ ಮನಸ್ಸಿನವರಾಗಿದ್ದರು.

ಅವರ ನಿಧನ ಎಲ್ಲ ಸಮಾಜದವರಿಗೆ ಆಘಾತವನ್ನುಂಟು ಮಾಡಿದೆ.

ಪಂಚಾಚಾರ್ಯರ ಪರಮ ಭಕ್ತರಾಗಿದ್ದ ಮಹದೇವಯ್ಯ ಅವರಿಗೆ 70 ವರ್ಷ ವಯಸ್ಸಾಗಿತ್ತು. ಅವರು ತಮ್ಮ ಹಿಂದೆ ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗ ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಬುಧವಾರ ಬೆಳಿಗ್ಗೆ 9 ಘಂಟೆಗೆ ನಂದಿಶ್ವರ ಕಲ್ಯಾಣ ಮಂಟಪದ ಆವರಣದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲದವರು ತಿಳಿಸಿದ್ದಾರೆ.

“SIHI KAHI” Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State